13 ಅಕ್ಟೋಬರ್ 2025 ಸೋಮವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 213 ಪುಟ-4 ಹಾಸನ E-mail : prajodayahsn@gmail.com RNI NO: KARKAN/2007/22629

ಜನಮನದ ದನಿ

# ಪ್ರಜೋದಯ

ದಿನಪತ್ರಿಕೆ

ಸಂಪಾದಕ : ಜೆ.ಆರ್. ಕೆಂಚೇಗೌಡ



ವಿಶಾಖಪಟ್ಟಣದಲ್ಲಿ ಆಸ್ಟ್ರೇಲಿಯಾ ವಿರುದ್ಧ ಭಾನುವಾರ ನಡೆದ ಮಹಿಳಾ ಏಷ್ಯಾಕಪ್ ನಲ್ಲಿ ಅರ್ಧ ಶತಕ(75 ರನ್) ಗಳಿಸಿದ ಭಾರತದ ಪ್ರತಿಕಾ ರಾವಲ್...



ಕುಸಿದ ಬದುಕಿನ ಸುತ್ತ » 2


ಸಂಪುಟ ಪುನಾರಚನೆ ಸುಳಿವು : ಮಂತ್ರಿಗಿರಿಗೆ ಲಾಬಿ » 3


ಬೇರ್ಪಟ್ಟ ಮರಿಗಳು ತಾಯಿ ಚಿರತೆ ಸುಪರ್ದಿಗೆ » 4


# ದರ್ಶನ ಸುಸೂತ್ರ: ಭಕ್ತರ ಸಂಖ್ಯೆ ಏರಿಕೆ

## ಹಾಸನಾಂಬ ದೇವಸ್ಥಾನಕ್ಕೆ ಲಕ್ಷಾಂತರ ಜನರ ಆಗಮನ। ಅಚ್ಚುಕಟ್ಟು ವ್ಯವಸ್ಥೆಗೆ ಅಪಾರ ಮೆಚ್ಚುಗೆ

• ಪ್ರಜೋದಯ ವರದಿ



**ಹಾಸನ:** ಹಾಸನಾಂಬ ದೇವಿ ಸಾರ್ವಜನಿಕ ದರ್ಶನದ ಮೂರನೇ ದಿನವಾದ ಭಾನುವಾರ ಲಕ್ಷಾಂತರ ಸಂಖ್ಯೆಯಲ್ಲಿ ಭಕ್ತರು ಸುಸೂತ್ರವಾಗಿ ದೇವಿ ದರ್ಶನ ಪಡೆದುಕೊಂಡರು.

ರಜಾ ದಿನವಾದ್ದರಿಂದ ಭಕ್ತರು ಮುಂಜಾನೆಯಿಂದಲೇ ಭಾರೀ ಸಂಖ್ಯೆಯಲ್ಲಿ ಆಗಮಿಸಿದ್ದರು. ಬೆಳಿಗ್ಗೆ 7 ಗಂಟೆಯವರೆಗೂ ಸಾಧಾರಣವಾಗಿದ್ದ ಭಕ್ತರ ಸಂಖ್ಯೆ ನಂತರದಲ್ಲಿ ಏರಿಕೆಯಾಯಿತು. ಜನಪ್ರತಿನಿಧಿಗಳು, ರಾಜಕಾರಣಿಗಳ ಸಂಖ್ಯೆ ಕಡಿಮೆ ಇದ್ದು, ಹಿರಿಯ ಅಧಿಕಾರಿಗಳು ತಮ್ಮ ಕುಟುಂಬದೊಂದಿಗೆ ಹಾಸನಾಂಬ ದರ್ಶನ ಪಡೆದರು. ಮಧ್ಯಾಹ್ನ 1.30 ರಿಂದ 3.30 ರವರೆಗೆ ನೈವೇದ್ಯಕ್ಕಾಗಿ ಗರ್ಭಗುಡಿ ಬಾಗಿಲು ಮುಚ್ಚಲಾಗಿತ್ತು. ಭಕ್ತರ ಸಂಖ್ಯೆ ಅಧಿಕವಾಗಿದ್ದರಿಂದ ಮುಂಜಾನೆ ಹಾಗು ಮಧ್ಯಾಹ್ನದ ನೈವೇದ್ಯದ ಸಮಯ ದಲ್ಲಿ ಕೊಂಚ ಬದಲಾವಣೆ ಮಾಡಿ ದರ್ಶನಕ್ಕೆ ಅವಕಾಶ ಮಾಡಿಕೊಡಲಾಯಿತು.

ಗರ್ಭಗುಡಿ ಬಾಗಿಲು ತೆರೆದ ದಿನದಿಂದಲೂ ಭಕ್ತರ ಸಂಖ್ಯೆ ಹೆಚ್ಚುತ್ತಲೇ ಇದೆ. ಶನಿವಾರ ಒಂದೇ ದಿನ ಅಂದಾಜು ಒಂದೂವರೆ ಲಕ್ಷದಷ್ಟು ಭಕ್ತರು ದರ್ಶನ ಪಡೆದುಕೊಂಡಿದ್ದಾರೆ. ವಿಶೇಷ ದರ್ಶನದ 1 ಸಾವಿರ ರೂ. ಹಾಗು 300 ರೂ. ಟಿಕೆಟ್ ಸಾಲುಗಳಲ್ಲಿ ಭಕ್ತರ ಸಂಖ್ಯೆ ಕಡಿಮೆ ಇತ್ತು. ಧರ್ಮ ದರ್ಶನದ ಸಾಲಿನಲ್ಲಿ ಶೀಘ್ರವಾಗಿ, ಗೊಂದಲವಿಲ್ಲದೆ ಶಾಂತಿಯುತವಾಗಿ ದರ್ಶನ ಪಡೆದ ಭಕ್ತರು ಜಿಲ್ಲಾಡಳಿತ ಮಾಡಿರುವ ವ್ಯವಸ್ಥೆಗೆ ಮೆಚ್ಚುಗೆ ವ್ಯಕ್ತಪಡಿಸಿದರು.

1000 ರೂ ಹಾಗು 300 ರೂ. ವಿಶೇಷ ದರ್ಶನದ ಟಿಕೆಟ್ ಖರೀದಿ ಮಾಡಿದವರು ಕೆಲವೇ ನಿಮಿಷಗಳಲ್ಲಿ ದೇವಿ ದರ್ಶನ ಪಡೆದು ಸಂತಸ ವ್ಯಕ್ತಪಡಿಸಿದರು. ಭಕ್ತರಿಗೆ ತೊಂದರೆಯಾಗದಂತೆ ಜರ್ಮನ್ ಟೆಂಟ್ ವ್ಯವಸ್ಥೆ ಮಾಡಲಾಗಿತ್ತು. ನೈವೇದ್ಯದ ನಂತರ ದೇವಾಲಯದ ಗರ್ಭಗುಡಿ ಬಾಗಿಲು ತೆರೆಯುವವರೆಗೂ ಕಾಯ್ದು ಸರತಿ ಸಾಲಿನಲ್ಲಿ ದೇವಿ ದರ್ಶನ ಪಡೆದರು. ಪ್ರಧಾನ ಅರ್ಚಕ ನಾಗರಾಜ್ ಅವರು ಕೂಡ ಹೆಚ್ಚಿನ ಸಂಖ್ಯೆಯ ಭಕ್ತರು ಸುಗಮ ದರ್ಶನ ಪಡೆಯುತ್ತಿರುವುದಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು. ಕಳೆದ ಮೂರು ದಿನಗಳಿಂದ ಧರ್ಮ ದರ್ಶನದ ಸಾಲು ತುಂಬಿ ತುಳುಕುತ್ತಿದ್ದರೆ, ವಿಶೇಷ ದರ್ಶನ ಪಡೆಯುವ ಸಾಲುಗಳು ಬಿಕೋ ಎನ್ನುತ್ತಿವೆ. ಈ ಹಿಂದಿನ ವರ್ಷಗಳಿಗಿಂತ ಈ ಬಾರಿ ಹಾಸನಾಂಬ ಉತ್ಸವ ಶಾಂತ ರೀತಿಯಲ್ಲಿ ನಡೆಯುತ್ತಿದೆ.

### ಮಧ್ಯ ರಾತ್ರಿ ಜನವೋ ಜನ

ವಾರಾಂತ್ಯದ ಸಮಯವಾಗಿದ್ದರಿಂದ ಶನಿವಾರ ದರ್ಶನಕ್ಕೆ ಬಂದ ಜನರ ಸಂಖ್ಯೆ ದಾಖಲೆ ಮಟ್ಟವನ್ನು ತಲುಪಿದೆ. ರಾತ್ರಿ 11 ಗಂಟೆಯ ನಂತರ ನಿರೀಕ್ಷೆಗೂ ಮೀರಿ ಜನರು ಆಗಮಿಸಿದ್ದರಿಂದ 5 ಕಿ.ಮೀ. ವ್ಯಾಪ್ತಿಯ ಬ್ಯಾರಿಕೇಡ್ ಒಳಾಂಗಣ ಮಾತ್ರವಲ್ಲದೇ ಸಂತೆಪೇಟೆಯ ಎಪಿಎಂಸಿ ವರೆಗೂ ಭಕ್ತರು ಸಾಲುಗಟ್ಟಿ ನಿಂತಿದ್ದರು. ಪರಿಸ್ಥಿತಿ ಅರಿತ ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅವರು ಮಧ್ಯರಾತ್ರಿ 1.30ಕ್ಕೆ ಭಕ್ತರಿಗೆ ವಿಡಿಯೋ ಸಂದೇಶ ರವಾನಿಸಿ, ಆಗಮಿಸಿದ ಎಲ್ಲರಿಗೂ ಸೂಕ್ತವಾಗಿ ಕಾಳಜಿ ವಹಿಸಿ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ. ಚಿಂತಿಸ ಬೇಡಿ, ಪ್ರತಿಯೊಬ್ಬರಿಗೂ ದರ್ಶನ ಸಿಗುತ್ತದೆ. ಬೆಳಗಿನ ಜಾವ 2 ರಿಂದ 5 ಗಂಟೆಯವರೆಗೆ ದೇವಸ್ಥಾನ ಮುಚ್ಚದೆ ಇರಲು ನಿರ್ಧರಿಸಿದ್ದೇವೆ, ಎಲ್ಲರೂ ದರ್ಶನ ಪಡೆಯಬಹುದೆಂದು ತಿಳಿಸಿ, ಸುಗಮ ದರ್ಶನಕ್ಕೆ ವ್ಯವಸ್ಥೆ ಕಲ್ಪಿಸಿದರು.

> **ಭಾನುವಾರ ಹಾಸನಾಂಬ ದೇವಿ ದರ್ಶನ ಸುಗಮವಾಗಿದ್ದು, ಭಾನುವಾರ ಬೆಳಿಗ್ಗೆ 5 ವರೆಗೆ ಒಟ್ಟು 2.75 ಲಕ್ಷ ಜನರು ದರ್ಶನ ಪಡೆದಿದ್ದಾರೆ. ಶನಿವಾರ ಬೆಳಿಗ್ಗೆ 5 ಗಂಟೆಯಿಂದ ರಾತ್ರಿ 8 ಗಂಟೆ ನಡುವೆ ಒಟ್ಟು 1.90 ಲಕ್ಷ ಭಕ್ತರು, ಶನಿವಾರ ರಾತ್ರಿ 8 ಗಂಟೆಯಿಂದ ಭಾನುವಾರ ಮುಂಜಾನೆ 5 ಗಂಟೆಯ ವರೆಗೆ 98 ಸಾವಿರ ಜನರು ದೇವಿಯ ದರ್ಶನ ಪಡೆದಿದ್ದು, ಮುಂದಿನ ದಿನಗಳಲ್ಲಿ ಇನ್ನಷ್ಟು ಜನರು ಆಗಮಿಸುವ ನಿರೀಕ್ಷೆ ಇದೆ.**
> **-ಕೃಷ್ಣಬೈರೇಗೌಡ, ಜಿಲ್ಲಾ ಉಸ್ತುವಾರಿ ಸಚಿವ**

### ಶುಚಿ, ರುಚಿಕರ ಪ್ರಸಾದ ವಿತರಣೆ

ಇಸ್ಕಾನ್ ಸಂಸ್ಥೆ ಸಹಕಾರದೊಂದಿಗೆ ದೇವಿಯ ದರ್ಶನಕ್ಕೆ ಆಗಮಿಸುವ ಲಕ್ಷಾಂತರ ಭಕ್ತರಿಗೆ ಶುಚಿ, ರುಚಿಯಾದ ದೊನ್ನೆ ಪ್ರಸಾದವನ್ನು ವಿತರಣೆ ಮಾಡಲಾಗುತ್ತಿದೆ. ಪೊಂಗಲ್, ಖಾರಬಾತ್, ಪಲಾವ್, ಬಿಸಿಬೇಳೆಬಾತ್, ರೈಸ್‌ಬಾತ್ ಹೀಗೆ ಬಗೆ ಬಗೆಯ ಪ್ರಸಾದ ವಿತರಣೆ ಮಾಡಲಾಗುತ್ತಿದೆ.

### ಎರಡೇ ದಿನದಲ್ಲಿ 2.24 ಕೋ.ರೂ. ಸಂಗ್ರಹ

**ಟಿಕೆಟ್, ಲಾಡು ಮಾರಾಟದಿಂದ ಆದಾಯ ಗಳಿಕೆ**

ಹಾಸನ: ಹಾಸನಾಂಬ ದರ್ಶನಕ್ಕೆ ಭಕ್ತರ ಸಂಖ್ಯೆ ಗಣನೀಯವಾಗಿ ಏರಿಕೆಯಾದಂತೆ ಆದಾಯವೂ ಹೆಚ್ಚಾಗುತ್ತಿದೆ. ಎರಡು ದಿನಗಳಲ್ಲಿ ಟಿಕೆಟ್ ಮತ್ತು ಲಾಡು ಮಾರಾಟದಿಂದ ಬರೋಬ್ಬರಿ 2.24 ಕೋ. ರೂ. ಸಂಗ್ರಹವಾಗಿದೆ.

ಗುರುವಾರ ಹಾಸನಾಂಬ ಗರ್ಭಗುಡಿ ಬಾಗಿಲು ತೆರೆದರೂ, ಶುಕ್ರವಾರದಿಂದ ಸಾರ್ವಜನಿಕರಿಗೆ ದೇವಿ ದರ್ಶನಕ್ಕೆ ಅವಕಾಶ ನೀಡಲಾಗಿದೆ. ಭಾನುವಾರ ಬೆಳಿಗ್ಗೆ 8 ಗಂಟೆಗೆ ಕೊನೆಗೊಂಡಂತೆ ಒಟ್ಟು 2,24,57,400ರೂ. ಸಂಗ್ರಹವಾಗಿದೆ.

300ರೂ. ಟಿಕೆಟ್‌ನ ದರ್ಶನದಲ್ಲಿ ಒಟ್ಟು 27,759 ಟಿಕೆಟ್‌ಗಳು ಮಾರಾಟವಾಗಿವೆ. ಇದರಲ್ಲಿ ಆನ್‌ಲೈನ್‌ನಲ್ಲಿ 4,499 ಹಾಗು ನೇರವಾಗಿ 23,260 ಟಿಕೆಟ್‌ಗಳನ್ನು ಖರೀದಿ ಮಾಡಲಾಗಿದೆ. ಇದರಿಂದ ಒಟ್ಟು 83,27,700 ರೂ. ಸಂಗ್ರಹವಾಗಿದೆ.

ಅದೇ ರೀತಿ 1000ರೂ. ವಿಶೇಷ ದರ್ಶನದ ಒಟ್ಟು 12,396 ಟಿಕೆಟ್‌ಗಳು ಮಾರಾಟವಾಗಿವೆ. ಇದರಲ್ಲಿ ಆನ್‌ಲೈನ್ ಬುಕ್ಕಿಂಗ್ 3,912 ಹಾಗು ನೇರವಾಗಿ 8,484 ಟಿಕೆಟ್‌ಗಳನ್ನು ಖರೀದಿ ಮಾಡಲಾಗಿದೆ. ಇದರಿಂದ ಒಟ್ಟು 1,23,96,000 ರೂ.ಆಗಿದೆ. ಒಟ್ಟು 17,337 ಲಾಡು ಪ್ರಸಾದ ಮಾರಾಟದಿಂದ 17,33,700ರೂ. ಆದಾಯ ಲಭಿಸಿದೆ. ಭಾನುವಾರದ ಆದಾಯವನ್ನು ಲೆಕ್ಕಹಾಕ ಬೇಕಿದ್ದು, ಇನ್ನೂ 10 ದಿನಗಳ ಕಾಲ ಭಕ್ತರಿಗೆ ದರ್ಶನ ಲಭ್ಯವಿರುವುದರಿಂದ ಈ ಬಾರಿ 15 ಕೋ. ರೂ. ಅಧಿಕ ಆದಾಯ ಸಂಗ್ರಹವಾಗಲಿದೆ ಎಂದು ಅಂದಾಜಿಸಲಾಗಿದೆ.

### ಕರ್ತವ್ಯ ಲೋಪ: ಕಂದಾಯ ಇಲಾಖೆಯ ನಾಲ್ವರ ಅಮಾನತು

**ಹಾಸನ:** ಹಾಸನಾಂಬ ದೇವಿ ದರ್ಶನದ ವೇಳೆ ಕರ್ತವ್ಯ ಲೋಪ ಆರೋಪದ ಮೇಲೆ ನಾಲ್ವರು ಕಂದಾಯ ಇಲಾಖೆ ಸಿಬ್ಬಂದಿಯನ್ನು ಅಮಾನತು ಮಾಡಲಾಗಿದೆ.

ಕಂದಾಯ ನಿರೀಕ್ಷಕರಾದ ಗೋವಿಂದರಾಜ್ ಮತ್ತು ಯೋಗಾನಂದ್, ಗ್ರಾಮ ಲೆಕ್ಕಾಧಿಕಾರಿಗಳಾದ ಸಂತೋಷ್ ಅಂಬಿಗರ ಹಾಗು ಶಿವರಾಜ್ ಮಹಿಮಾ ಪಟೇಲ್ ಅವರನ್ನು ಅಮಾನತು ಮಾಡಲಾಗಿದೆ.

ಗೋಲ್ಡ್ ಕಾರ್ಡ್ ಕೌಂಟರ್‌ನಲ್ಲಿ ಕಾರ್ಡ್ ಸ್ಕ್ಯಾನ್ ಮಾಡದೇ ಭಕ್ತರನ್ನು ದೇವಾಲಯದ ಒಳಬಿಟ್ಟ ಆರೋಪದ ಮೇಲೆ ಅಮಾನತು ಮಾಡಿ ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಆದೇಶ ಹೊರಡಿಸಿದ್ದಾರೆ. ಮೊದಲ ದಿನ ಕೂಡ ಕರ್ತವ್ಯದ ಗುರುತಿನ ಚೀಟಿಯನ್ನು ದುರುಪಯೋಗ ಆರೋಪದಲ್ಲಿ ಇಬ್ಬರು ನಿಲಯ ಪಾಲಕರನ್ನು ಅಮಾನತು ಮಾಡಲಾಗಿತ್ತು. ಈ ಮೂಲಕ ಕರ್ತವ್ಯ ಪಾಲನೆಯಲ್ಲಿ ಬೇಜವಾಬ್ದಾರಿತನ ತೋರುತ್ತಿರುವ ಅಧಿಕಾರಿಗಳ ಮೇಲೆ ಶಿಸ್ತು ಕ್ರಮ ಕೈಗೊಳ್ಳುವ ಎಚ್ಚರಿಕೆ ಸಂದೇಶವನ್ನು ಜಿಲ್ಲಾಡಳಿತ ನೀಡಿದೆ.



# ಬಿಹಾರ ಚುನಾವಣೆ: ಎನ್‌ಡಿಎ ಸೀಟು ಹಂಚಿಕೆ ಅಂತಿಮ

## ಬಿಜೆಪಿ- ಜೆಡಿಯು ತಲಾ 101 ಸ್ಥಾನಗಳಲ್ಲಿ ಸ್ಪರ್ಧೆ

• ಪ್ರಜೋದಯ ವರದಿ

**ನವದೆಹಲಿ:** ನವೆಂಬರ್‌ನಲ್ಲಿ ನಡೆಯಲಿರುವ ಬಿಹಾರ ವಿಧಾನಸಭಾ ಚುನಾವಣೆಗೆ ಎನ್‌ಡಿಎ ಸೀಟು ಹಂಚಿಕೆಯನ್ನು ಭಾನುವಾರ ಅಂತಿಮಗೊಳಿಸಿದೆ.

ಬಿಜೆಪಿ ಕೇಂದ್ರ ಕಚೇರಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ನಡೆದ ಕೇಂದ್ರ ಚುನಾವಣಾ ಸಮಿತಿ ಸಭೆಯಲ್ಲಿ ಎನ್‌ಡಿಎ ಮಿತ್ರ ಪಕ್ಷಗಳಾದ ಬಿಜೆಪಿ, ಜೆಡಿಯು, ಎಲ್‌ಜೆಪಿ (ಆರ್) ಆರ್‌ಎಲ್‌ಎಂ ಮತ್ತು ಹೆಚ್‌ಎಎಂ ನಡುವಿನ ಸೀಟು ಹಂಚಿಕೆಯನ್ನು ಅಂತಿಮಗೊಳಿಸಲಾಯಿತು. ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಮಾಹಿತಿ ಹಂಚಿಕೊಂಡಿದ್ದಾರೆ.

ಬಿಜೆಪಿ ಹಾಗು ಜೆಡಿಯು ತಲಾ 101 ಸ್ಥಾನಗಳಲ್ಲಿ ಸ್ಪರ್ಧಿಸಲಿದ್ದು, ಚಿರಾಗ್ ಪಾಸ್ವಾನ್ ನೇತೃತ್ವದ ಲೋಕ ಜನಶಕ್ತಿ ಪಕ್ಷ 29 ಸೀಟುಗಳನ್ನು ಪಡೆದುಕೊಂಡಿದೆ. ಉಳಿದಂತೆ ರಾಷ್ಟ್ರೀಯ ಲೋಕ ಸಮತಾ ಪಕ್ಷ ಆರು ಸ್ಥಾನಗಳಲ್ಲಿ ಮತ್ತು ಹಿಂದೂಸ್ತಾನಿ ಅವಾಮ್ ಮೋರ್ಚ್ 6 ಸ್ಥಾನಗಳಲ್ಲಿ ಕಣಕ್ಕಿಳಿಯಲಿದೆ. ಬಿಹಾರದಲ್ಲಿ ಮತ್ತೆ ಎನ್‌ಡಿಎ ಸರ್ಕಾರಕ್ಕೆ ಸಜ್ಜಾಗಿದೆ ಎಂದು ಧರ್ಮೇಂದ್ರ ಪ್ರಧಾನ್ ಹೇಳುವ ಮೂಲಕ ಸೀಟು ಹಂಚಿಕೆ ಸೂತ್ರವನ್ನು ಘೋಷಿಸಿದ್ದಾರೆ.



ಚುನಾವಣೆಗೆ ಸೀಟು ಹಂಚಿಕೆ ಬೆನ್ನಲ್ಲೇ ಮಹಾಘಟಬಂದನ್ ಕಾಲು ಎಳೆದಿರೋ ಬಿಹಾರ ಬಿಜೆಪಿ, ಎನ್‌ಡಿಎಯದ್ದು ಏಕಮತ, ಆದರೆ ಮಹಾ ಘಟ್‌ಬಂದನ್ ಭಿನ್ನಮತ ಎಂದು ವ್ಯಂಗ್ಯವಾಡಿದೆ. ಎನ್‌ಡಿಎ ಮೈತ್ರಿಕೂಟದಲ್ಲಿನ ಎಲ್ಲಾ ಪಕ್ಷಗಳ ನಡುವೆ ಸೀಟು ಹಂಚಿಕೆ ಪೂರ್ಣಗೊಂಡಿದೆ. ಎಲ್ಲಾ ಪಕ್ಷಗಳು ಒಟ್ಟಿಗೆ ಏಕತೆ ಯೊಂದಿಗೆ ಚುನಾವಣಾಕ್ಷೇತ್ರಕ್ಕೆ ಇಳಿದಿದ್ದೇವೆ. ಆದರೆ, ಮಹಾ ಘಟ್‌ಬಂದನ್‌ನ ಪಕ್ಷಗಳು ಪರಸ್ಪರ ಕಿತ್ತಾಡಿಕೊಳ್ಳುತ್ತಿವೆ. ನಾಮಪತ್ರ ಸಲ್ಲಿಸುವ ಮುಂಚೆ ಅವರಲ್ಲಿ ಮಾತುಕತೆ ನಡೆಯಬಹುದೇ ಎಂದು ಜನ ಕೇಳುತ್ತಿದ್ದಾರೆಂದು ಬಿಹಾರ ಬಿಜೆಪಿ ಹೇಳಿದೆ.

ಬಿಹಾರ ಚುನಾವಣೆ ಎರಡು ಹಂತಗಳಲ್ಲಿ ನಡೆಯಲಿದ್ದು, ಮೊದಲ ಹಂತ ನವೆಂಬರ್ 6ರಂದು ಮತ್ತು ಎರಡನೇ ಹಂತ ನವೆಂಬರ್ 11ರಂದು ನಡೆಯಲಿದೆ. ಮತ ಎಣಿಕೆ ನವೆಂಬರ್ 14ರಂದು ನಡೆಯಲಿದೆ. ವಿರೋಧ ಪಕ್ಷಗಳ ಮೈತ್ರಿಕೂಟ ಮಹಾ ಘಟಬಂಧನ್ ಅಥವಾ ಇಂಡಿಯಾ ಬ್ಲಾಕ್ (ಆರ್‌ಜೆಡಿ, ಕಾಂಗ್ರೆಸ್ ಮತ್ತು ಇತರ ಕೆಲವು ಪಕ್ಷಗಳು) ಇನ್ನು ತಮ್ಮ ಸೀಟು ಹಂಚಿಕೆ ಬಗ್ಗೆ ಪ್ರಕಟಿಸಿಲ್ಲ.

### ಅ.17 ರಿಂದ ಫಲಪುಷ್ಪ ಪ್ರದರ್ಶನ

ಹಾಸನ : ಹಾಸನಾಂಬ ದೇವಿ ಜಾತ್ರಾ ಮಹೋತ್ಸವದ ಅಂಗವಾಗಿ ಅ.17 ರಿಂದ 20ರವರೆಗೆ ನಗರದ ಸಿಲ್ವರ್ ಜ್ಯೂಬಲಿ ಅರ್ಚರ್ಡ್ ಪಾರ್ಕ್‌ನಲ್ಲಿ ತೋಟಗಾರಿಕೆ ಇಲಾಖೆ ವತಿಯಿಂದ ಫಲಪುಷ್ಪ ಪ್ರದರ್ಶನ ಆಯೋಜಿಸಲಾಗಿದೆ.

ಅ.19 ರಂದು ನಗರದ ಸರ್ಕಾರಿ ವಿಜಾನ ಕಾಲೇಜು ಆವರಣದಲ್ಲಿ ಶ್ವಾನ ಪ್ರದರ್ಶನ ಆಯೋಜಿಸಲಾಗಿದೆ. ಆಸಕ್ತ ನಗರದ ನಾಗರಿಕರು, ಖಾಸಗಿ ಸಂಸ್ಥೆಗಳು, ಸರ್ಕಾರಿ ಶಾಲೆ, ಕಾಲೇಜು ಹಾಗು ಸರ್ಕಾರಿ ಕಚೇರಿಗಳು, ಜಿಲ್ಲಾ ಪಂಚಾಯಿತಿ, ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರನ್ನು ಸಂಪರ್ಕಿಸಿ ನೋಂದಾಯಿಸಿಕೊಳ್ಳಬಹುದು. ವಿವರಗಳಿಗಾಗಿ ಮೊ.9164100138, 9986024885 ಸಂಪರ್ಕಿಸಬಹುದು.

# ಮೋಸದ ಷೇರು ಹೂಡಿಕೆ : 1.50 ಕೋ. ರೂ. ಪಂಗನಾಮ

• ಪ್ರಜೋದಯ ವರದಿ

**ಹಾಸನ:** ಕಡಿಮೆ ಅವಧಿಯಲ್ಲಿ ದುಪ್ಪಟ್ಟು ಹಣ ಮಾಡಲು ಷೇರು ಮಾರುಕಟ್ಟೆಯೇ ಸೂಕ್ತವೆಂದು ಮೋಸದ ಆನ್‌ಲೈನ್ ಜಾಲಕ್ಕೆ ಸಿಲುಕಿದ ವ್ಯಕ್ತಿಯೊಬ್ಬರು ಬರೋಬ್ಬರಿ 1.50 ಕೋ. ರೂ. ಪಂಗನಾಮ ಹಾಕಿಸಿಕೊಂಡಿದ್ದಾರೆ.

ಅರಸೀಕೆರೆ ತಾಲ್ಲೂಕು ಜಾವಗಲ್‌ನ ವ್ಯಕ್ತಿಯೊಬ್ಬರು ಹಣ ಕಳೆದುಕೊಂಡಿದ್ದು, ಕಳೆದ ಮೂರು ವರ್ಷಗಳಿಂದ ಷೇರು ಮಾರುಕಟ್ಟೆಯಲ್ಲಿ ಹಣ ಹೂಡಿ ಅನುಭವವಿರುವ ಅವರು ಅಲ್ಲಿನ ಎಲ್ಲಾ ಪ್ರಕ್ರಿಯೆಗಳನ್ನು ಅರಿತಿದ್ದರೂ ಮೋಸದ ಬಗ್ಗೆ ಅರಿವಿಗೆ ಬಾರದಿರುವುದು ಭಾರೀ ಬೆಲೆ ತೆರುವಂತೆ ಮಾಡಿದೆ.

ಆಗಸ್ಟ್ 20 ರಂದು ತಮ್ಮ ಆಂಡ್ರಾಯ್ಡ್ ಮೊಬೈಲ್‌ನಲ್ಲಿ ಫೇಸ್ ಬುಕ್ ಸ್ಕ್ರಾಲ್ ಮಾಡುತ್ತಿದ್ದಾಗ PMSL Smart Wealth Hub ಜಾಹಿರಾತು ಕಾಣಿಸಿದೆ. ಅದರ ಮೇಲೆ ಕ್ಲಿಕ್ ಮಾಡಿದ್ದು PMSL (Paytm Money) ಕಂಪನಿ ಮುಖಪುಟ ತೋರಿಸಿ ಅದರಲ್ಲಿ ಯಶಸ್ವಿನಿ ಜಿಂದಾಲ್ ಹೆಸರಿನಲ್ಲಿ ಮೂರು ಮೊಬೈಲ್ ನಂಬರ್ (9063764250, 8867177221 ಹಾಗು 8445150652) ಪ್ರತ್ಯಕ್ಷವಾಗಿದೆ. ಅದನ್ನು ನಂಬಿದ ಅವರು ಹಣ ಹೂಡಲು ಆಸಕ್ತಿಯಿದೆಯೆಂದು ಸಂದೇಶ ಕಳುಹಿಸಿದ್ದಾರೆ. ಆ ಬಳಿಕ trading ಮಾಡುವ ಸಲುವಾಗಿ paytm money QIB Account ತೆರೆಯಲು ಅಪ್ಲಿಕೇಶನ್ Registration Form ಅನ್ನು ಕಳುಹಿಸಿದ್ದರಿಂದ ಸಂಬಂಧಿಸಿದ ಮಾಹಿತಿಯನ್ನು ಭರ್ತಿಮಾಡಿ ಪುನಃ ಅವರಿಗೆ ಕಳುಹಿಸಲಾಗಿದೆ. ಅಪರಿಚಿತ ವ್ಯಕ್ತಿಯು ವಾಟ್ಸ್‌ಆ್ಯಪ್‌ಗೆ ಲಿಂಕ್ ಕಳುಹಿಸಿದ್ದು, ಅದನ್ನು ಕ್ಲಿಕ್ ಮಾಡಿದಾಗ Paytm-stockss.com website ಗೆ ತೋರಿಸಿದೆ. ಅಲ್ಲಿ KYC ನಮೂದಿಸಿ ಹೂಡಿಕೆ ಮಾಡಿದ ಹಣ ಹಾಗು ಲಾಭಾಂಶದ ವಿವರ ನೀಡುವುದಾಗಿ ತಿಳಿಸಿದೆ. ಅದಕ್ಕೆ ಸಮ್ಮತಿಸಿದ ವ್ಯಕ್ತಿ ಕೆವೈಸಿ ಮಾಡಿದ್ದಾರೆ. ಆ ಪ್ರಕ್ರಿಯೆ ಮುಗಿದ ಬಳಿಕ ಯಶಸ್ವಿನಿ ಜಿಂದಾಲ್ ಎಂಬುವವರು Paytm customer support ಮೊಬೈಲ್ ನಂಬರ್ 8886945952, 99311537420 ನೀಡಿ ಇವರಿಗೆ ಸಂಪರ್ಕಿಸಿದರೆ ಅವರು account number ಕೊಡುವುದಾಗಿ ತಿಳಿಸಿದ್ದಾರೆ. ಅದನ್ನು ನಂಬಿದ ವ್ಯಕ್ತಿ ಹಣ ಹೂಡಿಕೆ ಮಾಡಲು ಉತ್ಸುಕತೆ ತೋರಿದ್ದಾರೆ. ಕಡಿಮೆ ಬಂಡವಾಳ ಹಾಕಿ ಹೆಚ್ಚು ಪಡೆಯಬಹುದೆಂಬ ಮಾತಿಗೆ ಮರುಳಾದ ಅವರು Paytm customer support ನೀಡಿದ ಬ್ಯಾಂಕ್ ಖಾತೆಗೆ ಹಂತ ಹಂತವಾಗಿ 1,50,36,606 ರೂ. ವರ್ಗಾವಣೆ ಮಾಡಿದ್ದಾರೆ.

**ಮರಳಿ ಬಾರದ ಹಣ**

ಷೇರು ಮಾರುಕಟ್ಟೆಯಲ್ಲಿ ಹಣ ಹೂಡಿಕೆ ಮಾಡಿದ್ದೇನೆ, ಶೀಘ್ರದಲ್ಲೇ ದುಪ್ಪಟ್ಟು ಹಣ ಗಳಿಸುತ್ತೇನೆಂದು ನಂಬಿದ್ದ ಅವರಿಗೆ ಹಲವು ದಿನ ಕಳೆದರೂ ಯಾವ ಪ್ರತಿಕ್ರಿಯೆ ಬಂದಿಲ್ಲ, ನಂತರ ದೂರವಾಣಿ ಕರೆ ಮಾಡಿ ನಿಮ್ಮ ಕಮೀಷನ್ ಇಟ್ಟುಕೊಂಡು ಉಳಿದ ಹಣವನ್ನಾದರೂ ಜಮೆ ಮಾಡಿ ಎಂದು ಕೋರಿದ್ದಾರೆ. ಅದಕ್ಕೆ ಸಕಾರಾತ್ಮಕ ಪ್ರತಿಕ್ರಿಯೆ ಬಾರದೆ ಇದ್ದಾಗ ವಿಚಾರಿಸಿದಾಗ ತಾವು ಮೋಸ ಹೋಗಿದ್ದು ತಿಳಿದು ಬಂದಿದೆ. ಸಿಇಎನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಹೆದ್ದಾರಿ ಸಮೀಪ ಯುವಕನ ಶವ ಪತ್ತೆ: ಕೊಲೆ ಶಂಕೆ

• ಪ್ರಜೋದಯ ವರದಿ

**ಹೊಳೆನರಸೀಪುರ:** ತಾಲ್ಲೂಕಿನ ಆಲಗೌಡನಹಳ್ಳಿಯ ಮೈಸೂರು-ಹಾಸನ ರಾಷ್ಟ್ರೀಯ ಹೆದ್ದಾರಿ ಸಮೀಪ ಭಾನುವಾರ ಯುವಕನ ಶವ ಪತ್ತೆಯಾಗಿದ್ದು, ಸಾಕ್ಷ್ಯ ನಾಶಕ್ಕಾಗಿ ಮೃತದೇಹದ ಮೇಲೆ ಸೊಪ್ಪು ಹಾಕಲಾಗಿದೆ. ಯುವಕನ ಕೊಲೆಗೈದು ಬಿಸಾಡಿದ್ದಾರೆಂದು ಕುಟುಂಬಸ್ಥರು ಆರೋಪಿಸಿದ್ದಾರೆ.

ಪಟ್ಟಣದ ಅಂಬೇಡ್ಕರ್ ನಗರದ ಸುದೀಪ್ (24) ಮೃತ ದುರ್ದೈವಿ. ಈತ ಮೈಸೂರು ಜಿಲ್ಲೆ ಭೇರ್ಯ ಗ್ರಾಮದಲ್ಲಿರುವ ತಮ್ಮ ಚಿಕ್ಕಮ್ಮನ ಮನೆ ಸಮೀಪದ ಯುವತಿ ಯೊಬ್ಬಳನ್ನು ಪ್ರೀತಿಸುತ್ತಿದ್ದ. ಆಕೆ ಇತ್ತೀಚೆಗೆ ಸುದೀಪ್‌ನಿಂದ ಅಂತರ ಕಾಯ್ದುಕೊಂಡಿದ್ದಳು. ಅರಕಲಗೂಡು ತಾಲ್ಲೂಕು ಅಜ್ಜೂರು ಗ್ರಾಮದ ಸಂಜು ಎಂಬಾತನ ಜೊತೆಗೆ ವಿವಾಹವಾಗುತ್ತೇನೆಂದು ಹೇಳಿದ್ದಳು. ಅದರಿಂದ ಸುದೀಪ್ ಜಗಳ ಮಾಡಿದ್ದ.

» ನಾಲ್ಕನೇ ಪುಟದಲ್ಲಿ




# ಪಾಸ್ ರದ್ದು : ಬೆಂಬಲಿಗರಿಗಾಗಿ ಟಿಕೆಟ್ ಖರೀದಿಸಿದ ರಾಜಕಾರಣಿಗಳು

## ಸಂಸದ, ಉಸ್ತುವಾರಿ ಸಚಿವ ತಲಾ 5 ಲ.ರೂ. ಮೊತ್ತದ ಟಿಕೆಟ್ ಹಂಚಿಕೆ

• ಪ್ರಜೋದಯ ವರದಿ



**ಹಾಸನ:** ಹಾಸನಾಂಬ ದರ್ಶನಕ್ಕೆ ಈ ಬಾರಿ ಪಾಸ್ ವ್ಯವಸ್ಥೆ ರದ್ದುಪಡಿಸಿ, ಕಟ್ಟುನಿಟ್ಟಿನ ಕ್ರಮ ಕೈಗೊಂಡಿರುವ ಹಿನ್ನಲೆಯಲ್ಲಿ ಸಂಸದ ಶ್ರೇಯಸ್ ಪಟೇಲ್ ಅವರು ತಮ್ಮ ಕಾರ್ಯಕರ್ತರಿಗೆ ದೇವಿಯ ದರ್ಶನಕ್ಕಾಗಿ 5 ಲ.ರೂ. ಮೊತ್ತದ 1,200 ಟಿಕೆಟ್‌ಗಳನ್ನು ವೈಯಕ್ತಿಕವಾಗಿ ಖರೀದಿಸಿ ಹಂಚಿದ್ದಾರೆ.

ಈ ಮೊದಲು ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅವರು ತಮ್ಮ ಕ್ಷೇತ್ರದ ಜನರಿಗಾಗಿ 5 ಲ.ರೂ. ಮೊತ್ತದ ಟಿಕೆಟ್ ಖರೀದಿ ಮಾಡಿದ್ದರು. ಇದೀಗ ಅದೇ ಮಾದರಿಯನ್ನು ಸಂಸದ ಶ್ರೇಯಸ್ ಪಟೇಲ್ ಅವರೂ ಅನುಸರಿಸಿದ್ದಾರೆ. ಇವರಿಬ್ಬರು ಮಾತ್ರವಲ್ಲದೇ ಜಿಲ್ಲೆಯ ಶಾಸಕರು, ಪರಾಜಿತ ಅಭ್ಯರ್ಥಿಗಳು, ಮಾಜಿ ಶಾಸಕರು, ರಾಜಕೀಯ ಮುಖಂಡರು ಕೂಡ ಪಾಸ್‌ಗಳನ್ನು ಖರೀದಿಸಿ ತಮ್ಮ ಬೆಂಬಲಿಗರಿಗೆ ಹಂಚಲು ಮುಂದಾಗಿದ್ದಾರೆ. ಹೀಗಾಗಿ ಸಾಮಾನ್ಯ ಭಕ್ತರಿಗೆ ದೇವಿ ದರ್ಶನ ಸುಗಮವಾಗಿದ್ದು, ದೇವಾಲಯದ ಆದಾಯವೂ ಹೆಚ್ಚಾಗಲು ಪ್ರಮುಖ ಕಾರಣವಾಗಿದೆ.

ವಿವಿಐಪಿ, ವಿಐಪಿ ಪಾಸ್ ವ್ಯವಸ್ಥೆ ಜಾರಿಯಲ್ಲಿದ್ದ ಸಮಯದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು ತಮ್ಮ ಕ್ಷೇತ್ರಕ್ಕೆ ಕಾರ್ಯಕರ್ತರಿಗೆ ಸಾವಿರಾರು ಪಾಸ್‌ಗಳನ್ನು ಹಂಚುತ್ತಿದ್ದರು. ಅಲ್ಲದೇ ಶಾಸಕರು, ಸಂಸದರಿಗೂ ನೀಡುತ್ತಿದ್ದ ಪಾಸ್‌ಗಳಿಂದ ಪ್ರತಿಬಾರಿ ಹಾಸನಾಂಬ ದರ್ಶನಕ್ಕೆ ನೂಕುನುಗ್ಗಲು ಉಂಟಾಗುತ್ತಿತ್ತು. ಆದರೆ, ಈ ಬಾರಿ ಆ ವ್ಯವಸ್ಥೆಯನ್ನು ಸಂಪೂರ್ಣ ರದ್ದುಗೊಳಿಸಿರುವುದರಿಂದ ರಾಜಕಾರಣಿಗಳು ತಮ್ಮ ಬೆಂಬಲಿಗರಿಗೆ ದರ್ಶನ ವ್ಯವಸ್ಥೆ ಮಾಡಲು ಸ್ವತಃ ಟಿಕೆಟ್ ಖರೀದಿಸುವಂತಾಗಿದೆ.

ಈ ಬಾರಿ ಹಾಸನಾಂಬ ದರ್ಶನ ಮಹೋತ್ಸವಕ್ಕೆ ಪಾಸ್ ವಿತರಣೆಯಲ್ಲಿ ಜಿಲ್ಲಾಡಳಿತ ಕಠಿಣ ನಿಯಮಗಳನ್ನು ಜಾರಿಗೆ ತಂದಿದೆ. ದರ್ಶನದ ನಾಲ್ಕನೇ ದಿನವಾದ ಭಾನುವಾರ ಭಕ್ತರ ಸಂಖ್ಯೆ ತೀವ್ರವಾಗಿ ಏರಿಕೆ ಕಂಡಿದ್ದು, ಪ್ರಸ್ತುತ ಜಾರಿಯಲ್ಲಿರುವ ಗೋಲ್ಡನ್ ಪಾಸ್‌ಗಳಿಗಾಗಿ ಸಂಸದರಿಗೆ ಭಾರೀ ಬೇಡಿಕೆ ಬಂದಿತ್ತು. ಆದರೆ, ಗೋಲ್ಡನ್ ಪಾಸ್ ಮಿತಿಯನ್ನು ಸೀಮಿತಗೊಳಿಸಿ, ಸಮಯವನ್ನು ನಿಗದಿ ಮಾಡಿರುವುದರಿಂದ ವಿಧಿ ಇಲ್ಲದೆ ಟಿಕೆಟ್ ಖರೀದಿಸುವಂತಾಗಿದೆ.

ಸಾಮಾನ್ಯವಾಗಿ ಜನಪ್ರತಿನಿಧಿಗಳು ಜಿಲ್ಲಾಡಳಿತದ ಮೂಲಕ ಉಚಿತ ಪಾಸ್‌ಗಳನ್ನು ಪಡೆಯಲು ಅಥವಾ ಶಿಫಾರಸ್ಸು ಮಾಡಲು ಪ್ರಯತ್ನಿಸುತ್ತಾರೆ. ಆದರೆ, ಜಿಲ್ಲಾ ಉಸ್ತುವಾರಿ ಸಚಿವರು ಕಠಿಣ ನಿರ್ಧಾರ ತೆಗೆದುಕೊಂಡಿರುವುದರಿಂದ ಸಂಸದರು ಕೂಡ ಜಿಲ್ಲಾಡಳಿತ ತೆಗೆದುಕೊಂಡಿರುವ ತೀರ್ಮಾನಕ್ಕೆ ಬದ್ಧರಾಗಿ ಟಿಕೆಟ್‌ಗಳನ್ನು ತಾವೇ ವೈಯಕ್ತಿಕವಾಗಿ ಖರೀದಿಸಿದ್ದಾರೆ. ಈ ನಿರ್ಧಾರದಿಂದಾಗಿ, ಜಿಲ್ಲಾಡಳಿತದ ಪಾಸ್ ವಿತರಣೆ ವ್ಯವಸ್ಥೆಗೆ ಯಾವುದೇ ತೊಂದರೆ ಉಂಟಾಗಲಿಲ್ಲ. ಜಿಲ್ಲಾಡಳಿತದ ವ್ಯವಸ್ಥೆಯನ್ನು ಗೌರವಿಸಿ, ದೇವಸ್ಥಾನದ ಆದಾಯಕ್ಕೂ ಲಾಭವಾಗುವಂತೆ ಮತ್ತು ಕಾರ್ಯಕರ್ತರನ್ನೂ ತೃಪ್ತಿಪಡಿಸಿದ ಸಂಸದರ ನಡೆ ಇತರೆ ಜನಪ್ರತಿನಿಧಿಗಳಿಗೆ ಮಾದರಿಯಾಗಿದೆ.

# ಸಂಪುಟ ಪುನಾರಚನೆ ಸುಳಿವು: ಮಂತ್ರಿಗಿರಿಗೆ ಲಾಬಿ

## ಇಂದು ಸಚಿವರಿಗೆ ಸಿಎಂ ಔತಣಕೂಟ | ಮೌಲ್ಯಮಾಪನ ಹೈಕಮಾಂಡ್‌ಗೆ ತಲೆನೋವು

• ಪ್ರಜೋದಯ ವರದಿ

**ಬೆಂಗಳೂರು:** ರಾಜ್ಯ ಸರ್ಕಾರದ ಸಚಿವ ಸಂಪುಟ ಪುನಾರಚನೆ ಕಸರತ್ತು ನಡೆಯುತ್ತಿದೆ. ಸಂಪುಟ ಪುನಾರಚನೆ ಕುರಿತಾಗಿ ಸ್ವತಃ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಸುಳಿವು ನೀಡಿದ್ದಾರೆ. ಈ ನಡುವೆ ಸೋಮವಾರ ಸಿದ್ದರಾಮಯ್ಯ ಸಚಿವರಿಗೆ ಔತಣಕೂಟ ಆಯೋಜನೆ ಮಾಡಿದ್ದಾರೆ. ಈ ಎಲ್ಲಾ ಬೆಳವಣಿಗೆಯ ನಡುವೆ ಸಚಿವರಿಗೆ ಹೈಕಮಾಂಡ್ ಮೌಲ್ಯಮಾಪನದ ತಲೆನೋವು ಶುರುವಾಗಿದೆ.

34 ಸಚಿವ ಪೈಕಿ ಈಗಾಗಲೇ ಇಬ್ಬರಿಗೆ ತಲೆದಂಡವಾಗಿದೆ. ಉಳಿದಂತೆ ಯಾವ ಸಚಿವರು ಸೇಫ್ ಝೋನ್ ನಲ್ಲಿ ಇದ್ದಾರೆ? ಯಾವ ಸಚಿವರು 50–50 ಝೋನ್‌ನಲ್ಲಿ ಇದ್ದಾರೆ ಹಾಗು ಯಾವ ಸಚಿವರು ಡೇಂಜರ್ ಝೋನ್‌ನಲ್ಲಿ ಇದ್ದಾರೆಂಬ ಚರ್ಚೆಗಳು ರಾಜಕೀಯ ಪಡಸಾಲೆಯಲ್ಲಿ ಶುರುವಾಗಿದೆ. ನವೆಂಬರ್ ಇಲ್ಲವೇ ಡಿಸೆಂಬರ್‌ನಲ್ಲಿ ಸಂಪುಟಕ್ಕೆ ಮೇಜರ್ ಸರ್ಜರಿ ಸಾಧ್ಯತೆ ಇದೆ. ಹನ್ನೆರಡಕ್ಕೂ ಹೆಚ್ಚು ಸಚಿವರನ್ನ ಕೈಬಿಟ್ಟು ಹೊಸಬರಿಗೆ ಅವಕಾಶ ನೀಡಲಾಗುತ್ತದೆ ಎಂಬುವುದು ಸದ್ಯಕ್ಕೆ ಕೇಳಿ ಬರುತ್ತಿದೆ. ಹೊಸ ಮುಖಗಳಿಗೆ ಅವಕಾಶ ನೀಡುವ ಬಗ್ಗೆ ಹೈಕಮಾಂಡ್ ಚರ್ಚೆ ನಡೆಸಿದೆ.

ಸಚಿವರ ಮೌಲ್ಯ ಮಾಪನ ವಿವಿಧ ಅಂಶಗಳನ್ನು ಮುಂದಿಟ್ಟಿಕೊಂಡು ನಡೆಯುವ ಸಾಧ್ಯತೆ ಇದೆ. ಭ್ರಷ್ಟಾಚಾರದ ಆರೋಪ ಹೊತ್ತಿರುವ



ಸಚಿವರಿಗೆ ಹೈಕಮಾಂಡ್ ಸಂಪುಟ ಪುನಾರಚನೆ ಸಂದರ್ಭದಲ್ಲಿ ಗೇಟ್ ಪಾಸ್ ಕೊಡುವ ಸಾಧ್ಯತೆ ಇದೆ. ಇನ್ನು ಹಿರಿತನಯೂ ಕೆಲವು ಸಂದರ್ಭದಲ್ಲಿ ನಿರ್ಧಾರಕ್ಕೆ ಪೂರಕವಾಗಿ ಕೆಲಸ ಮಾಡುವ ಸಾಧ್ಯತೆ ಇದೆ. ಅಲ್ಲದೆ, ಸಚಿವರ ಕಾರ್ಯವೈಖರಿಯ ಬಗ್ಗೆ ಶಾಸಕರಿಗೆ ಇರುವ ಆರೋಪಗಳು ಪ್ರಮುಖ ಕಾರಣವಾಗಿರಬಹುದು.

ಸಕ್ರಿಯವಾಗಿ ಇಲಾಖಾ ಕೆಲಸ ಕಾರ್ಯಗಳು ಹಾಗು ಪಕ್ಷದ ಸಂಘಟನೆಯ ಕೆಲಸದಲ್ಲಿ ತೊಡಗಿಸಿಕೊಳ್ಳುವವರಿಗೆ ಸಂಪುಟ ಪುನಾರಚನೆಯ ಸಂದರ್ಭದಲ್ಲಿ ಸಮಸ್ಯೆ ಆಗುವ ಸಾಧ್ಯತೆ ಕಡಿಮೆ. ಆದರೆ ನಿಷ್ಕ್ರಿಯ ಸಚಿವರು ಮಂತ್ರಿ ಗಿರಿ ಕಳೆದುಕೊಳ್ಳುವ ಆತಂಕದಲ್ಲಿದ್ದಾರೆ.

**ಲಾಬಿ ಶುರು**

ಸಚಿವ ಸಂಪುಟ ಸೇರ್ಪಡೆಗೆ ಈಗಾಗಲೇ ಸಾಕಷ್ಟು ಲಾಬಿ ನಡೆಯುತ್ತಿದೆ. ಮುಖ್ಯಮಂತ್ರಿ ಔತನ ಕೂಟದ ಸಂಪುಟ ಸೇರ್ಪಡೆಗೆ ಲಾಬಿ ಮತ್ತಷ್ಟು ತೀವ್ರಗೊಳ್ಳಲಿದೆ. ಕೆಲವು ಆಕಾಂಕ್ಷಿಗಳು ಹೈಕಮಾಂಡ್ ಮಟ್ಟದಲ್ಲಿ ಲಾಬಿ ನಡೆಸುತ್ತಿದ್ದಾರೆ. ಮತ್ತೆ ಕೆಲವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಬಳಿಕ ಸಂಪುಟದಲ್ಲಿ ಸ್ಥಾನಕ್ಕಾಗಿ ಪ್ರಯತ್ನ ಶುರುಮಾಡಿದ್ದಾರೆ.

ಪರಮೇಶ್ವರ್–ಗೃಹ ಇಲಾಖೆ, ಎಂ.ಬಿ. ಪಾಟೀಲ್–ಬೃಹತ್ ಮತ್ತು ಮಧ್ಯಮ ಕೈಗಾರಿಕೆ, ಕೆ.ಜೆ.ಜಾರ್ಜ್–ಇಂಧನ, ಜಮೀರ್ ಅಹ್ಮದ್ ಖಾನ್–ವಸತಿ ಹಾಗು ವಕ್ಫ್, ರಾಮಲಿಂಗಾ ರೆಡ್ಡಿ–ಸಾರಿಗೆ, ಮುಜರಾಯಿ, ಸತೀಶ್ ಜಾರಕಿಹೊಳಿ–ಲೋಕೋಪಯೋಗಿ, ಕೃಷ್ಣ ಬೈರೇಗೌಡ–ಕಂದಾಯ, ಪ್ರಿಯಾಂಕ್ ಖರ್ಗೆ–ಗ್ರಾಮೀಣಾಭಿವೃದ್ಧಿ, ಪಂಚಾಯತ್‌ರಾಜ್, ಹೆಚ್.ಕೆ.ಪಾಟೀಲ್–ಕಾನೂನು ಮತ್ತು ಸಂಸದೀಯ ವ್ಯವಹಾರ, ಚೆಲುವರಾಯಸ್ವಾಮಿ–ಕೃಷಿ, ಈಶ್ವರ್ ಖಂಡ್ರೆ– ಅರಣ್ಯ, ಲಕ್ಷ್ಮೀ ಹೆಬ್ಬಾಳ್ಕರ್–ಮಹಿಳಾ ಮತ್ತು ಮಕ್ಕಳ ಕಲ್ಯಾಣ, ಸಂತೋಷ್ ಲಾಡ್–ಕಾರ್ಮಿಕ, ಬೈರತಿ ಸುರೇಶ್– ನಗರಾಭಿವೃದ್ಧಿ, ದಿನೇಶ್ ಗುಂಡೂರಾವ್–ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಎಸ್.ಎಸ್.ಮಲ್ಲಿಕಾರ್ಜುನ–ಗಣಿಗಾರಿಕೆ ಮತ್ತು ತೋಟಗಾರಿಕೆ, ಕೆ.ಹೆಚ್.ಮುನಿಯಪ್ಪ–ಆಹಾರ ಮತ್ತು ನಾಗರಿಕ ಪೂರೈಕೆ. ಇವರ ಕಾರ್ಯವೈಖರಿ ಕುರಿತು ಸದಾಭಿಪ್ರಾಯವಿದ್ದು, ಸಂಪುಟದಲ್ಲೇ ಉಳಿಯುವ ನಿರೀಕ್ಷೆ ಇದೆ.

**ಸ್ಥಾನ ಕೈ ತಪ್ಪುವ ಆತಂಕ**

ಕೆ.ವೆಂಕಟೇಶ್–ಪಶುಸಂಗೋಪನೆ ಮತ್ತು ರೇಷ್ಮೆ, ಶರಣ ಬಸಪ್ಪ ದರ್ಶನಾಪೂರ–ಸಣ್ಣ ಕೈಗಾರಿಕೆ, ಆರ್.ಬಿ.ತಿಮ್ಮಾಪುರ– ಅಬಕಾರಿ, ರಹೀಂಖಾನ್–ಪೌರಾಡಳಿತ, ಶಿವಾನಂದ ಪಾಟೀಲ್–ಜವಳಿ ಮತ್ತು ಸಕ್ಕರೆ, ಬೋಸರಾಜ್–ಸಣ್ಣ ನೀರಾವರಿ, ಡಾ.ಎಂ.ಸಿ.ಸುಧಾಕರ್–ವೈದ್ಯಕೀಯ ಶಿಕ್ಷಣ ಇವರು ಸಂಪುಟದಿಂದ ಹೊರ ಹೋಗುವ ಸಾಧ್ಯತೆ ಇದೆ ಎನ್ನಲಾಗಿದೆ.

### ಸಚಿವ ಸ್ಥಾನದ ಪ್ರಬಲ ಆಕಾಂಕ್ಷಿಗಳು

ಆರ್.ವಿ.ದೇಶಪಾಂಡೆ, ಬಿ.ಕೆ.ಹರಿಪ್ರಸಾದ್, ಶಿವಲಿಂಗೇಗೌಡ, ಸಲೀಂ ಅಹಮದ್, ಬಸವರಾಜ ರಾಯರೆಡ್ಡಿ, ಕೃಷ್ಣಪ್ಪ, ಟಿ.ಬಿ.ಜಯಚಂದ್ರ, ರೂಪ ಶಶಿಧರ್, ನಾಗೇಂದ್ರ, ಅಪ್ಪಾಜಿ ನಾಡಗೌಡ, ಲಕ್ಷ್ಮಣ್ ಸವದಿ, ತರೀಕೆರೆ ಶ್ರೀನಿವಾಸ್, ರಿಜ್ವಾನ್ ಅರ್ಷದ್, ಯು.ಟಿ.ಖಾದರ್, ಕೆ.ಎನ್.ರಾಜಣ್ಣ, ರಘುಮೂರ್ತಿ, ಪಿ.ಎಂ.ನರೇಂದ್ರ ಸ್ವಾಮಿ, ಶಿವಣ್ಣ, ಅಜಯ್ ಸಿಂಗ್ ಅವರು ಪ್ರಮುಖ ಆಕಾಂಕ್ಷಿಯಾಗಿದ್ದಾರೆ.

# ಪಾಕಿಸ್ತಾನ-ಅಫ್ಘಾನಿಸ್ತಾನ ಉದ್ವಿಗ್ನತೆ ತೀವ್ರ: 58 ಪಾಕ್ ಸೈನಿಕರ ಸಾವು

• ಪ್ರಜೋದಯ ವರದಿ

**ಅಫ್ಘಾನಿಸ್ತಾನ:** ಕಾಬೂಲ್ ಮೇಲಿನ ವಾಯು ದಾಳಿಯಿಂದ ಭುಗಿಲೆದ್ದ ಪಾಕಿಸ್ತಾನ ಮತ್ತು ಅಫ್ಘಾನಿಸ್ತಾನ ನಡುವಿನ ಉದ್ವಿಗ್ನತೆ ಪೂರ್ಣ ಪ್ರಮಾಣದ ಯುದ್ಧದತ್ತ ಸಾಗುತ್ತಿದೆ.

ಕಾಬೂಲ್ ದಾಳಿಗೆ ಪ್ರತಿಕ್ರಿಯೆಯಾಗಿ ತಾಲಿಬಾನ್ ನೇತೃತ್ವದ ಅಫ್ಘಾನ್ ಭದ್ರತಾ ಪಡೆಗಳು ಶನಿವಾರ ತಡರಾತ್ರಿ ಡುರಾಂಡ್ ಲೈನ್ (ಅಫ್ಘಾನ್–ಪಾಕಿಸ್ತಾನ ಗಡಿ) ದಾಟಿ ಪಾಕಿಸ್ತಾನಿ ಸೇನಾ ಔಟ್‌ಪೋಸ್ಟ್‌ಗಳ ಮೇಲೆ ದಾಳಿ ಮಾಡಿವೆ. ಗಡಿ ಪ್ರಾಂತ್ಯಗಳಿಂದ ಅಫ್ಘಾನ್ ಪಡೆಗಳು ಏಕಕಾಲಕ್ಕೆ ಪಾಕ್ ಚೆಕ್ ಪೋಸ್ಟ್‌ಗಳ ಮೇಲೆ ದಾಳಿ ನಡೆಸಿವೆ. ಏಳು ಪಾಕಿಸ್ತಾನಿ ಸೇನಾ ಔಟ್‌ಪೋಸ್ಟ್‌ಗಳು ನಾಶವಾಗಿದ್ದು ಹಲವು ಪೋಸ್ಟ್‌ಗಳನ್ನು ಅಫ್ಘಾನ್ ಪಡೆಗಳು ವಶಪಡಿಸಿಕೊಂಡಿವೆ. ದಾಳಿ ಎಷ್ಟು ಅನಿರೀಕ್ಷಿತವಾಗಿತ್ತೆಂದರೆ ಪಾಕಿಸ್ತಾನಿ ಸೈನಿಕರು ತಮ್ಮ ಶಸ್ತ್ರಾಸ್ತ್ರಗಳನ್ನು ತ್ಯಜಿಸಿ ಪಲಾಯನ ಮಾಡಬೇಕಾಯಿತು.

ಅಫ್ಘಾನಿಸ್ತಾನ್ ದಾಳಿ ನಡೆಸಿದ ಮತ್ತೊಂದು ವಿಡಿಯೋ ವೈರಲ್ ಆಗಿದ್ದು ಅದರಲ್ಲಿ ಅಲ್ಲಾಹು ಅಕ್ಬರ್ ಎಂದು ಪ್ರಾರ್ಥನೆ ಮಾಡುತ್ತಾ ಭಯ ಪಡುತ್ತಿರುವುದನ್ನು ಕೇಳಬಹುದು. ಪಾಕಿಸ್ತಾನದ ಸೈನಿಕರ ಗುಂಪು ನಿಂತಿದ್ದ ಜಾಗಕ್ಕೆ ಅಫ್ಘಾನ್ ದಾಳಿ ನಡೆಸಿದೆ. ಆ ದಾಳಿಯ ಹೊಡೆತಕ್ಕೆ ಪಾಕಿಸ್ತಾನಿ ಸೈನಿಕರು ಛಿದ್ರವಾಗಿದ್ದು ದೇಹಗಳು ಆಕಾಶದೆತ್ತರಕ್ಕೆ ಹಾರಿ ಬಿದ್ದಿದೆ. ಇದು



ವರೆಗೆ ಪಾಕಿಸ್ತಾನದ 58 ಸೈನಿಕರನ್ನು ಕೊಂದಿರುವುದಾಗಿ ತಾಲಿಬಾನ್ ಹೇಳಿಕೊಂಡಿದೆ.

ಅಫ್ಘಾನ್ ಪಡೆಗಳ ದಾಳಿಯ ನಂತರ ಪಾಕಿಸ್ತಾನಿ ಸೈನಿಕರು ಓಡಿಹೋದರೆಂದು ಹುರಿಯತ್ ರೇಡಿಯೋ ವರದಿ ಮಾಡಿದೆ. ಖೋಸ್ಟ್ ಪ್ರಾಂತ್ಯದ ಗಡಿ ಪ್ರದೇಶದಲ್ಲಿ ಪಾಕಿಸ್ತಾನಿ ಸೈನಿಕರು ತ್ಯಜಿಸಿದ ಶಸ್ತ್ರಾಸ್ತ್ರಗಳನ್ನು ಅಫ್ಘಾನ್ ಪಡೆಗಳು ಪರಿಶೀಲಿಸುತ್ತಿರುವ ವೀಡಿಯೋ ಅನ್ನು ಹುರಿಯತ್ ರೇಡಿಯೋ ಪ್ರಸಾರ ಮಾಡಿದೆ. ಅಫ್ಘಾನ್ ಮಾಧ್ಯಮ ವರದಿಗಳ ಪ್ರಕಾರ, ಹೆಲ್ಮಂಡ್, ಕಂದಹಾರ್, ಜಬುಲ್, ಪಕ್ತಿಕಾ, ಖೋಸ್ಟ್, ನಂಗರ್ಹಾರ್ ಮತ್ತು ಕುನಾರ್ ಪ್ರಾಂತ್ಯಗಳಲ್ಲಿನ ಪಾಕಿಸ್ತಾನಿ ನೆಲೆಗಳ ಮೇಲೆ ಅಫ್ಘಾನ್ ಪಡೆಗಳು ದಾಳಿ ಮಾಡಿವೆ. ಕಾರ್ಯಾಚರಣೆ ಮಧ್ಯರಾತ್ರಿ 12 ಗಂಟೆಗೆ ಕೊನೆಗೊಂಡಿದೆಯೆಂದು ಅಫ್ಘಾನ್ ರಕ್ಷಣಾ ಸಚಿವಾಲಯ ತಿಳಿಸಿದೆ. ಆದಾಗ್ಯೂ, ಇತ್ತೀಚಿನ ವರದಿಗಳು ಹೋರಾಟ ಇನ್ನೂ ಮುಂದುವರೆದಿದೆಯೆಂದು ಸೂಚಿಸುತ್ತವೆ. ಪಾಕಿಸ್ತಾನಿ ಸೇನೆಯು ನಿರಂತರವಾಗಿ ಮಾರ್ಟರ್‌ಗಳಿಂದ ಅಫ್ಘಾನಿಸ್ತಾನದ ಮೇಲೆ ಶೆಲ್ ದಾಳಿ ನಡೆಸುತ್ತಿದೆ. ಅಫ್ಘಾನಿಸ್ತಾನದಿಂದ ಅಪ್ರಚೋದಿತ ಗುಂಡಿನ ದಾಳಿಗೆ ಸಂಪೂರ್ಣ ಬಲದಿಂದ ಪ್ರತಿಕ್ರಿಯಿಸುತ್ತಿದ್ದೇವೆಂದು ಪಾಕಿಸ್ತಾನಿ ಭದ್ರತಾ ಅಧಿಕಾರಿಗಳು ತಿಳಿಸಿದ್ದಾರೆ. ಗಡಿ ಯುದ್ಧಕ್ಕೂ 6ಕ್ಕೂ ಹೆಚ್ಚು ಸ್ಥಳಗಳಲ್ಲಿ ಗುಂಡಿನ ದಾಳಿ ನಡೆದಿದೆಯೆಂದು ಅವರು ವರದಿ ಮಾಡಿದ್ದಾರೆ. ಮೂರು ಪಾಕಿಸ್ತಾನಿ ಗಡಿ ಪೋಸ್ಟ್‌ಗಳನ್ನು ವಶಪಡಿಸಿಕೊಂಡಿದ್ದೇವೆಂದು ತಾಲಿಬಾನ್ ಪಡೆಗಳು ಹೇಳಿವೆ. ಪಾಕಿಸ್ತಾನಿ ಭದ್ರತಾ ಅಧಿಕಾರಿಗಳು ಹಲವಾರು ಅಫ್ಘಾನ್ ಸ್ಥಾನಗಳನ್ನು ನಾಶಪಡಿಸಿದ್ದೇವೆಂದು ಹೇಳಿಕೊಂಡಿದ್ದಾರೆ.

# ಕೆ.ಹೊಸಕೋಟೆ ಆಸ್ಪತ್ರೆಗೆ ಶಾಶ್ವತ ವೈದ್ಯರ ನೇಮಕಕ್ಕೆ ಒತ್ತಾಯ

• ಪ್ರಜೋದಯ ವರದಿ

**ಆಲೂರು:** ಕೆ.ಹೊಸಕೋಟೆ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಕೂಡಲೆ ಶಾಶ್ವತ ವೈದ್ಯರನ್ನು ನೇಮಿಸಬೇಕೆಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಕೆ.ಹೊಸಕೋಟೆ ಹೋಬಳಿ ವ್ಯಾಪ್ತಿಗೊಳಪಡುವ ಹತ್ತು ಕಿ.ಮೀ. ವ್ಯಾಪ್ತಿಯಲ್ಲಿ ಯಾವುದೇ ಸರ್ಕಾರಿ ಆಸ್ಪತ್ರೆಗಳಿಲ್ಲ. ಸರ್ಕಾರಿ ಆಸ್ಪತ್ರೆಗಳಿರುವ ರಾಯರಕೊಪ್ಪಲು, ಬಾಳ್ಳುಪೇಟೆ, ಯಸಳೂರು, ಹೆತ್ತೂರು, ಶುಕ್ರವಾರ ಸಂತೆ ಸೇರಿ ಯಾವುದೇ ಕೇಂದ್ರಕ್ಕೆ ರಾತ್ರಿ ವೇಳೆ ಹೋಗ ಬೇಕಾದರೂ ಕನಿಷ್ಟ ಹನ್ನೆರಡರಿಂದ ಹದಿನೈದು ಕಿ.ಮೀ. ಸಾಗಿ ಚಿಕಿತ್ಸೆ ಪಡೆಯಬೇಕಾಗಿದೆ.

ಕೆ.ಹೊಸಕೋಟೆಯಲ್ಲಿ ಸುಸಜ್ಜಿತ ಆಸ್ಪತ್ರೆಯಿದೆ, ಪ್ರಯೋಗಾಲಯ ಇದೆಯಾದರೂ ಪರೀಕ್ಷಕರ ಕೊರತೆ ಇದೆ. ಒಳರೋಗಿಗಳನ್ನು ದಾಖಲಿಸಿಕೊಳ್ಳುವ ಅವಕಾಶವಿದ್ದರೂ ವ್ಯವಸ್ಥೆಯಿಲ್ಲ. ಸುಸಜ್ಜಿತ ವೈದ್ಯರ ವಸತಿ ನಿಲಯವಿದೆ. ಹಲವು ತಿಂಗಳಿನಿಂದ ಹಗಲು ವೇಳೆಯಲ್ಲಿ ವೈದ್ಯರು ಆಸ್ಪತ್ರೆಗೆ ಬಂದು ಹೋಗುತ್ತಾರೆ. ರಾತ್ರಿ ವೇಳೆಯಲ್ಲಿ ವೈದ್ಯರು ಸಿಗುದ ಕಾರಣದಿಂದ ಯಾವುದೇ ತುರ್ತು ಚಿಕಿತ್ಸೆ ದೊರಕದೆ





ತೀವ್ರ ತೊಂದರೆಯಾಗಿದೆ. ನಿರಂತರವಾಗಿ ಕೇಂದ್ರದಲ್ಲಿ ವಾಸ್ತವ್ಯ ಹೂಡಿ ಸೇವೆ ಮಾಡುವ ವೈದ್ಯರನ್ನು ನೇಮಿಸಬೇಕೆಂದು ಹರಿಹಳ್ಳಿ ಸತ್ಯನಾರಾಯಾಣ ಮನವಿ ಮಾಡಿಕೊಂಡಿದ್ದಾರೆ.

ಶೀಘ್ರದಲ್ಲಿ ವೈದ್ಯರನ್ನು ನೇಮಿಸದಿದ್ದರೆ ತಾಲ್ಲೂಕು ವೈದ್ಯಾಧಿಕಾರಿಗಳು ಮತ್ತು ಜಿಲ್ಲಾ ಆರೋಗ್ಯ ಅಧಿಕಾರಿಗಳನ್ನು ಗ್ರಾಮಸ್ಥರೊಂದಿಗೆ ಭೇಟಿ ಮಾಡಿ ಮನವಿ ಮಾಡಲಾಗುವುದು ಎಂದಿದ್ದಾರೆ.

ವೈದ್ಯರ ಕೊರತೆ ಇದೆ. ಸುತ್ತಮುತ್ತಲಿನ ಪ್ರಾಥಮಿಕ ಆರೋಗ್ಯ ಕೇಂದ್ರದ ಮೂವರು ವೈದ್ಯರು ವಾರದಲ್ಲಿ 2 ದಿನ ಕೆ.ಹೊಸಕೋಟೆ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಸೇವೆ ಮಾಡುತ್ತಿದ್ದಾರೆ. ಆ ವೈದ್ಯರೂ ಸಹ ಡಬಲ್ ಡ್ಯೂಟಿ ಮಾಡುತ್ತಿದ್ದಾರೆ. ಸದ್ಯದಲ್ಲೇ ಸರ್ಕಾರ ವೈದ್ಯರ ಕೊರತೆ ನೀಗಿಸುವ ವಿಶ್ವಾಸವಿದೆ ಎಂದು ತಾಲ್ಲೂಕು ಆರೋಗ್ಯಾಧಿಕಾರಿ ಡಾ|| ನಿಸಾರ್ ಫಾತಿಮ ಪ್ರತಿಕ್ರಿಯಿಸಿದ್ದಾರೆ.

# ಸಹಕಾರಿ ಕ್ಷೇತ್ರದಿಂದ ರೈತರ ಬದುಕು ಸದೃಢ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಕೇವಲ 10 ಗುಂಟೆ ಕೃಷಿ ಜಮೀನು ಹೊಂದಿರುವ ರೈತನಿಗೂ ಸಹ ಸಾಲದ ಸೌಲಭ್ಯ ಕಲ್ಪಿಸಲಾಗುತ್ತಿದೆಂದು ಶಾಸಕ ಸಿ.ಎನ್. ಬಾಲಕೃಷ್ಣ ಅವರು ಹೇಳಿದರು.

ತಾಲ್ಲೂಕಿನ ದಿಡಗ ಕೃಷಿ ಪತ್ತಿನ ಸಹಕಾರ ಸಂಘದ ಆವರಣದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಷೇರುದಾರ ಸದಸ್ಯರಿಗೆ ಸಾಲದ ಚೆಕ್ ವಿತರಿಸಿ ಮಾತನಾಡಿದ ಅವರು, ರೈತರ ಬದುಕು ಹಸನುಗೊಂಡು ಸದೃಢಗೊಳ್ಳುವಲ್ಲಿ ಸಹಕಾರಿ ಕ್ಷೇತ್ರ ಪ್ರಮುಖ ಪಾತ್ರ ವಹಿಸುತ್ತಿದೆ ಎಂದರು.

ದಿಡಗ ಸಂಘದಿಂದ ಪ್ರಸ್ತುತ ಸಾಲಿನಲ್ಲಿ 300 ಷೇರುದಾರ ರೈತ ಸದಸ್ಯರಿಗೆ ಶೂನ್ಯ ಬಡ್ಡಿ ದರದಲ್ಲಿ 96 ಲಕ್ಷ ರೂ. ಸಾಲ ನೀಡಲಾಗಿದೆ. ಈ ಮೊದಲು 50ಕ್ಕೂ ಹೆಚ್ಚು ಸ್ವ–ಸಹಾಯ ಸಂಘಗಳಿಗೆ ಕಡಿಮೆ ಬಡ್ಡಿ ದರದಲ್ಲಿ 2 ಕೋಟಿಗೂ ಹೆಚ್ಚು ಸಾಲ ಸೌಲಭ್ಯ ಕಲ್ಪಿಸಲಾಗಿದೆ ಎಂದು ತಿಳಿಸಿದರು.

ನಾವು ಎಂದಿಗೂ ಕೈಕಟ್ಟಿ ಕೂರುವವರಲ್ಲ. ತಾಲ್ಲೂಕನ್ನು ಸಂಪೂರ್ಣ ನೀರಾವರಿಗೊಳಿಸುವ ಆಶಯ ಹೊಂದಿದ್ದು ಪರಿಶ್ರಮದ ಫಲವಾಗಿ ಕಳೆದ 2–3 ವರ್ಷಗಳಿಂದ ಹಿರೀಸಾವೆ–ಜುಟ್ಟನಹಳ್ಳಿ, ನುಗ್ಗೇಹಳ್ಳಿ, ಕಲ್ಲೇ



ಸೋಮನಹಳ್ಳಿ, ಸಂತೇಶಿವರ ಹಾಗೂ ನವಿಲೆ ಏತನೀರಾವರಿ ಯೋಜನೆಗಳ ಮೂಲಕ 150ಕ್ಕೂ ಹೆಚ್ಚು ಕೆರೆ- ಕಟ್ಟೆಗಳಿಗೆ ನೀರು ತುಂಬಿಸುವ ಕಾರ್ಯ ಮಾಡಲಾಗಿದೆ ಎಂದರು.

ಅದರಿಂದ ವ್ಯಾಪ್ತಿಯಲ್ಲಿ ಅಂತರ್ಜಲ ಚೇತರಿಕೆ ಕಂಡಿದ್ದು ಕೊಳವೆ ಬಾವಿಗಳಲ್ಲಿ ಮೇಲೆಯೇ ನೀರು ಸಾಕಷ್ಟು ಪ್ರಮಾಣದಲ್ಲಿ ಲಭ್ಯವಾಗುತ್ತಿದೆ. ಅದರಿಂದ ಕೃಷಿ ಚಟುವಟಿಕೆ ಚುರುಕುಗೊಂಡಿದ್ದು, ಜನ–ಜಾನುವಾರುಗಳು ಕುಡಿಯಲು ನೀರು ದೊರೆಯುತ್ತಿದೆಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರ ಕನಸಿನ ಯೋಜನೆಯಾದ ತೋಟಿಕೆರೆ ಏತ ನೀರಾವರಿ ಯೋಜನೆಯ ಕಾಮಗಾರಿ ಪ್ರಗತಿಯಲ್ಲಿದ್ದು ಶೀಘ್ರದಲ್ಲಿಯೇ ಪೂರ್ಣಗೊಳ್ಳಲಿದೆ. ಈ ಹಂಗಾಮಿನ ಅಂತಿಮ ವೇಳೆಯಷ್ಟರಲ್ಲಿ ಪ್ರಾಯೋಗಿಕವಾಗಿ ತೋಟಿ ವ್ಯಾಪ್ತಿಯ ಕೆರೆಗಳಿಗೆ ನೀರು ಹರಿಸುವ ಪ್ರಯತ್ನ ಮಾಡಲಾಗುವುದೆಂದು ಭರವಸೆ ನೀಡಿದರು.

ದಿಡಗ ಏತನೀರಾವರಿ ಯೋಜನೆಯನ್ನು ಕೈಗೆತ್ತಿಕೊಂಡಿದ್ದು ಪ್ರಸ್ತಾವನೆಯ ಹಂತದಲ್ಲಿದೆ. ರಾಜ್ಯ ಸರ್ಕಾರ ಮನಸ್ಸು ಮಾಡಿ ಅನುಮೋದನೆ ನೀಡಿ ಅಂದುಕೊಂಡಂತೆಯೇ ಆದರೆ ಮುಂದಿನ ವರ್ಷದಲ್ಲಿ ಕಾಮಗಾರಿಗೆ ಚಾಲನೆ ನೀಡಲಾಗುವುದೆಂದು ತಿಳಿಸಿದರು.

ಸಂಘದಅಧ್ಯಕ್ಷ ನರಿಹಳ್ಳಿ ತಾತೇಗೌಡ ಅವರು ಮಾತನಾಡಿ, ಶಾಸಕರಾದ ಸಿ.ಎನ್.ಬಾಲಕೃಷ್ಣ ಅವರ ಮಾರ್ಗದರ್ಶನದಲ್ಲಿ ಸಂಘದ ನಿರ್ದೇಶಕರ ಸಹಕಾರ ಪಡೆದು ಸಂಘದ ಹಾಗೂ ಷೇರುದಾರ ಸದಸ್ಯರ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಲಾಗುವುದು ಎಂದರು.

ತಾಲ್ಲೂಕು ಪಂಚಾಯಿತಿ ಮಾಜಿ ಸದಸ್ಯರಾದ ಪುಟ್ಟರಾಜು, ಎಂ.ಆರ್. ವಾಸು, ಎಪಿಎಂಸಿ ಮಾಜಿ ಅಧ್ಯಕ್ಷ ರಘುರಾಮ್, ಸಹಕಾರ ಸಕ್ಕರೆ ಕಾರ್ಖಾನೆಯ ಮಾಜಿ ಅಧ್ಯಕ್ಷ ತೋಟಿ ಜಯರಾಮ್, ಸಂಘದ ಮಾಜಿ ಅಧ್ಯಕ್ಷ ಶ್ರೀಕಂಠಪ್ಪ, ನಿರ್ದೇಶಕರಾದ ಮಲ್ಲೇಗೌಡ, ಹೆಚ್.ಕೆ.ಯೋಗೇಶ್, ಬಾಲಕೃಷ್ಣ, ಹೆಚ್.ಕೆ.ಮಹೇಶ್, ಲೋಕೇಶ್, ವೆಂಕಟೇಶ್, ತುಮಕೂರು ಮಧು, ಸುಮಿತ್ರಮ್ಮ, ತುಳಸಿ, ನಾಮಿನಿ ಅಭಿಲಾಶ್, ಕಾರ್ಯನಿರ್ವಹಕಾಧಿಕಾರಿ ನಿಂಗಮ್ಮ, ಸಿಬ್ಬಂದಿ ವರ್ಗ, ಷೇರುದಾರ ಸದಸ್ಯರು ಹಾಗೂ ಇತರರು ಇದ್ದರು.

# ವಿದ್ಯುತ್ ವ್ಯತ್ಯಯ

• ಪ್ರಜೋದಯ ವರದಿ

**ಹಾಸನ:** ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ವತಿಯಿಂದ ಅ.13 ರಂದು ಬಸವಾಘಟ್ಟ, ದುದ್ದ ಮತ್ತು ಸೋಮನಹಳ್ಳಿ ವಿ.ವಿ. ಕೇಂದ್ರಗಳಲ್ಲಿ ತ್ರೈಮಾಸಿಕ ನಿರ್ವಹಣಾ ಕೆಲಸ ಹಮ್ಮಿಕೊಂಡಿರುವುದರಿಂದ ಬೆಳಿಗ್ಗೆ 9ರಿಂದ ಸಂಜೆ 6ರವರೆಗೆ ಬಸವಾಘಟ್ಟ ವಿ.ವಿಕೇಂದ್ರದಿಂದ ಸರಬರಾಜಾಗುವ ಜಾಡಘಟ್ಟ, ಆದಿಹಳ್ಳಿ, ರಂಗಾಪುರ, ಬೆಲವತ್ತಳ್ಳಿ, ಬೈರಾಪುರ, ವೇದಾವತಿ, ಹೊನ್ನಾವರ, ಸಿದ್ದಾಪುರ, ಪೂಮಗಾಮೆ, ಬಸವಾಘಟ್ಟ ಮತ್ತು ಬಾಗೇಶಪುರ, ದುದ್ದ ವಿ.ವಿ. ಕೇಂದ್ರದಿಂದ ಸರಬರಾಜಾಗುವ ನಂದಿಹಳ್ಳಿ, ಆನೆಹಳ್ಳಿ, ಹೆರಗು, ದುದ್ದ, ಗೌಡಗೆರೆ, ಸಂತೆಕೊಪ್ಪಲು, ಪಿ–ಕೋಡಿಹಳ್ಳಿ, ಹೆಚ್.ಮೈಲನಹಳ್ಳಿ, ಕಾರೇಬೋರೆ, ಕಿತ್ತಾನೆಕೆರೆ, ಅಟ್ಟಾವರ, ಮುದಿಗೆರೆ, ಅಟ್ಟಾವರ ಹೊಸಹಳ್ಳಿ, ಹನುಮಂತೇಗೌಡನಕೊಪ್ಪಲು, ಸಾವಂಕನಹಳ್ಳಿ, ಚಾಮರಾಜಪುರ, ಮಂಜೇನಹಳ್ಳಿ ಕಾವಲು, ವಳಗೇರಹಳ್ಳಿ ಕೊಪ್ಪಲು, ವಳಗೇರಹಳ್ಳಿ, ಕೋಡಿಕೊಪ್ಪಲು, ಅರಸೀಹಳ್ಳಿ ಹಾಗೂ ಸೋಮನಹಳ್ಳಿ ವಿ.ವಿ.ಕೇಂದ್ರದಿಂದ ಸರಬರಾಜಾಗುವ ಸೋಮನಹಳ್ಳಿ, ಚಿಕ್ಕಮೇನಹಳ್ಳಿ, ಹಿರೇಕಡಲೂರು ಮತ್ತು ಸುತ್ತಮುತ್ತಲ ಪ್ರದೇಶಗಳ ವಿದ್ಯುತ್ ಸ್ಥಾವರಗಳಿಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ.

# ಸಾವಯವ ಆಹಾರ ಪದಾರ್ಥಗಳ ಸೇವನೆ ಅಗತ್ಯ



• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ದಿನನಿತ್ಯದ ಆಹಾರ ಪದ್ಧತಿಯಲ್ಲಿ ಸಾವಯವ ಆಹಾರ ಪದಾರ್ಥಗಳನ್ನು ಹೆಚ್ಚು ಬಳಸುವುದರಿಂದ ಉತ್ತಮ ಆರೋಗ್ಯ ಲಭಿಸಲಿದೆ ಎಂದು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಶ್ರವಣಬೆಳಗೊಳ ಯೋಜನಾಧಿಕಾರಿ ಕೆ. ಪುರಂದರ ಅವರು ಹೇಳಿದರು.

ತಾಲ್ಲೂಕಿನ ವಿರೂಪಾಕ್ಷಪುರ ಗ್ರಾಮದಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಹಮ್ಮಿಕೊಂಡಿದ್ದ ರೈತಕ್ಷೇತ್ರ ಪಾಠಶಾಲೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಹಣ, ಆಸ್ತಿ ಸಂಪಾದನೆಗಿಂತ ಆರೋಗ್ಯ ಕಾಪಾಡಿಕೊಳ್ಳುವುದು ಮುಖ್ಯ ಎಂದರು.

ಯೋಜನೆ ವತಿಯಿಂದ ಜನರಲ್ಲಿ ಪರಿಸರ ಉಳಿಸುವ ಕುರಿತು ಜಾಗೃತಿ ಮೂಡಿಸುವ ಸಲುವಾಗಿ ಹಾಗೂ ರೈತರು ಸಾವಯವ ಬೆಳೆಗಳನ್ನು ಬೆಳೆಯಲು ಪ್ರೇರೇಪಿಸುವ ನಿಟ್ಟಿನಲ್ಲಿ ರೈತಕ್ಷೇತ್ರ ಪಾಠಶಾಲೆ ಕಾರ್ಯಕ್ರಮ ಹಮ್ಮಿಕೊಳ್ಳುವ ಮೂಲಕ ಜನರಲ್ಲಿ ಜಾಗೃತಿ ಮೂಡಿಸಲಾ ಗುತ್ತಿದೆ ಎಂದು ತಿಳಿಸಿದರು.

ವೀರೇಂದ್ರ ಹೆಗಡೆಯವರ ಆಶಯದಂತೆ ಗ್ರಾಮಾಭಿವೃದ್ಧಿ ಯೋಜನೆಯ ಮೂಲಕ ಹಲವು ಸಮಾಜಮುಖಿ ಕೆಲಸಗಳಿಗೆ ಹೆಚ್ಚಿನ ಆದ್ಯತೆ ನೀಡುತ್ತಾ ಬರಲಾಗುತ್ತಿದೆ. ಕೃಷಿ, ಶಿಕ್ಷಣ, ದೇವಾಲಯ ಜೀರ್ಣೋದ್ಧಾರ ಹಾಗೂ ಕೆರೆಗಳ ಪುನಶ್ಚೇತನಕ್ಕೆ ಹೆಚ್ಚು ಒತ್ತು ನೀಡಲಾಗಿದೆ ಎಂದರು.

ಯೋಜನೆಯ ಸಿರಿಧಾನ್ಯ ವಿಭಾಗದ ಅಧಿಕಾರಿ ಜಯರಾಮ್ ಮಾತನಾಡಿ, ಸಿರಿಧಾನ್ಯ ಬೇಸಾಯದ ಕ್ರಮ ಅದರಿಂದಾಗುವ ಉಪಯೋಗ ಔಷಧಿ ಗುಣಗಳನ್ನು ಹೊಂದಿರುವ ಸಿರಿಧಾನ್ಯಗಳ ಬಗ್ಗೆ ಜನರಿಗೆ ಮಾಹಿತಿ ನೀಡಿದರು.

ಒಕ್ಕೂಟದ ಅಧ್ಯಕ್ಷ ನಾಗರಾಜು, ಯೋಜನೆಯ ಕೃಷಿ ಮೇಲ್ವಿಚಾರಕ ಟಿ.ಎಂ.ಮಹದೇವ ಪ್ರಸಾದ್, ಸೇವ ಪ್ರತಿನಿಧಿ ಭಾಗ್ಯ, ಸಹಾಯ ಸಂಘಗಳ ಸಂಘದ ಸದಸ್ಯರು ಹಾಗೂ ರೈತರು ಭಾಗವಹಿಸಿದ್ದರು.

# ಭಾರತಕ್ಕೆ 270 ರನ್ ಮುನ್ನಡೆ

## ಕುಲದೀಪ್ ಯಾದವ್ 5 ವಿಕೆಟ್ | ವೆಸ್ಟ್ ಇಂಡೀಸ್ 173ಕ್ಕೆ 2 ವಿಕೆಟ್


• ಪ್ರಜೋದಯ ವರದಿ

**ದೆಹಲಿ:** ಆತಿಥೇಯ ಭಾರತ ವಿರುದ್ಧ ಇಲ್ಲಿನ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ 2ನೇ ಟೆಸ್ಟ್ ಪಂದ್ಯದ 3ನೇ ದಿನದಾಟದಲ್ಲಿ ವೆಸ್ಟ್ ಇಂಡೀಸ್ 81.5 ಓವರ್‌ಗಳಲ್ಲಿ 248 ರನ್‌ಗಳಿಗೆ ತನ್ನೆಲ್ಲ ವಿಕೆಟ್‌ಗಳನ್ನು ಕಳೆದುಕೊಂಡಿದೆ. ಅದರೊಂದಿಗೆ ಮೊದಲ ಇನಿಂಗ್ಸ್‌ನಲ್ಲಿ ಭಾರತ 270 ರನ್‌ಗಳ ಮುನ್ನಡೆ ದಾಖಲಿಸಿದೆ.

ವಿಂಡೀಸ್ ತಂಡದ ಮೇಲೆ ಫಾಲೋ ಆನ್ ಹೇರಿದೆ. ಎರಡನೇ ದಿನದ ಅಂತ್ಯಕ್ಕೆ ವಿಂಡೀಸ್ 140ಕ್ಕೆ ನಾಲ್ಕು ವಿಕೆಟ್ ಕಳೆದುಕೊಂಡು ಸಂಕಷ್ಟದಲ್ಲಿತ್ತು. ಇಂದು ಕೂಡ ಭಾರತೀಯ ಬೌಲರ್‌ಗಳ ನಿಖರ ದಾಳಿಯನ್ನು ಎದುರಿಸಲು ಸಾಧ್ಯವಾಗಲಿಲ್ಲ. ಭಾರತದ ಪರ ಕುಲದೀಪ್ ಯಾದವ್ 82 ರನ್ನಿಗೆ ಐದು ವಿಕೆಟ್ ಕಿತ್ತು ಮಿಂಚಿದರು. ರವೀಂದ್ರ ಜಡೇಜ ಮೂರು ಮತ್ತು ಜಸ್‌ಪ್ರೀತ್‌ಬೂಮ್ರಾ ಹಾಗೂ ಮೊಹಮ್ಮದ್ ಸಿರಾಜ್ ತಲಾ ಒಂದು ವಿಕೆಟ್ ಗಳಿಸಿದರು.

ವಿಂಡೀಸ್ ಪರ ಅಥನೇಜ್ 41 ಹಾಗೂ ಶಾಯಿ ಹೋಪ್ 36 ರನ್ ಗಳಿಸಿ ಔಟ್ ಆದರು. ಕೊನೆಯ ವಿಕೆಟ್‌ಗೆ ಆ್ಯಂಡರ್ಸನ್ ಪಿಲಿಫ್ (ಅಜೇಯ 24) ಹಾಗೂ ಜೇಡನ್ ಸೀಲ್ಸ್ (13) ಅಲ್ಪ ಪ್ರತಿರೋಧ ಒಡ್ಡಿದರು.

ಈ ಮೊದಲು ಯಶಸ್ವಿ ಜೈಸ್ವಾಲ್ (175) ಹಾಗೂ ನಾಯಕ ಶುಭಮನ್ ಗಿಲ್ (ಅಜೇಯ 129) ಅಮೋಘ ಶತಕದ ಬೆಂಬಲದೊಂದಿಗೆ ಭಾರತ ಮೊದಲ ಇನಿಂಗ್ಸ್‌ನಲ್ಲಿ ಐದು ವಿಕೆಟ್ ನಷ್ಟಕ್ಕೆ 518 ರನ್ ಗಳಿಸಿ ಡಿಕ್ಲೇರ್ ಘೋಷಿಸಿತ್ತು. ಸಾಯಿ ಸುದರ್ಶನ್ (87), ಧ್ರುವ್ ಜುರೇಲ್ (44)



ಹಾಗೂ ನಿತೀಶ್ ರೆಡ್ಡಿ (43) ಸಹ ಉಪಯುಕ್ತ ಕೊಡುಗೆ ನೀಡಿದ್ದರು.

ಅಹಮದಾಬಾದ್‌ನಲ್ಲಿ ನಡೆದ ಮೊದಲ ಟೆಸ್ಟ್ ಪಂದ್ಯದಲ್ಲಿ ಭಾರತ ಇನಿಂಗ್ಸ್ ಹಾಗೂ 140 ರನ್ ಅಂತರದ ಬೃಹತ್ ಗೆಲುವು ದಾಖಲಿಸಿತ್ತು. ಈಗ ದೆಹಲಿ ಪಂದ್ಯವನ್ನು ಗೆದ್ದು ಸರಣಿ ಕ್ಲೀನ್ ಸ್ವೀಪ್‌ಗೈಯುವ ಇರಾದೆಯಲ್ಲಿದೆ.

# ಹಾಕಿ : ಭಾರತದ ಗೆಲುವಿನ ಆಟ ಮುಂದುವರಿಕೆ

• ಪ್ರಜೋದಯ ವರದಿ

**ಮಲೇಷ್ಯಾ:** ಭಾರತ ಜೂನಿಯರ್ ಪುರುಷರ ಹಾಕಿ ತಂಡವು ಸುಲ್ತಾನ್ ಆಫ್ ಜೊಹರ್ ಕಪ್ ಟೂರ್ನಿಯಲ್ಲಿ ಗೆಲುವಿನ ಓಟವನ್ನು ಮುಂದುವರಿಸಿತು. ಭಾನುವಾರ ನಡೆದ ಪಂದ್ಯದಲ್ಲಿ ಭಾರತ ತಂಡವು 42ರಿಂದ ನ್ಯೂಜಿಲೆಂಡ್ ಎದುರು ಗೆದ್ದಿತು.

ಭಾರತದ ಅರ್ಷದೀಪ್ ಸಿಂಗ್ (2ನೇ ನಿಮಿಷ), ಪಿ.ಬಿ. ಸುನಿಲ್ (15ನಿ), ಅರೈಜೀತ್ ಸಿಂಗ್ ಹುಂಡಾಲ್ (25ನಿ) ಮತ್ತು ರೋಶನ್ ಕುಮಾರ್ (47ನಿ) ಅವರು ಗೋಲು ಗಳಿಸಿದರು. ಅದರಿಂದಾಗಿ ತಂಡವು ಗೆಲುವಿನತ್ತ ಸಾಗಿತು. ಕಿವೀಸ್ ತಂಡದ ಗಸ್ ನೆಲ್ಸನ್ (41ನೇ ನಿ) ಮತ್ತು ಏಡನ್ ಮ್ಯಾಕ್ಸ್ (52ನಿ) ಗೋಲು ಗಳಿಸಿದರು. ಭಾರತ ತಂಡವು ತನ್ನ ಮೊದಲ ಪಂದ್ಯದಲ್ಲಿ 3–2ರಿಂದ ಗ್ರೇಟ್ ಬ್ರಿಟನ್ ವಿರುದ್ಧ ಜಯಿಸಿತ್ತು.

ಈ ಪಂದ್ಯದಲ್ಲಿ ಭಾರತದ ಆಟಗಾರರು ಆರಂಭದಿಂದಲೇ ಆಕ್ರಮಣಶೀಲ ಆಟವಾಡಿದರು. 2ನೇ ನಿಮಿಷದಲ್ಲಿಯೇ ಅರ್ಷದೀಪ್ ಅವರು ಸರಾಗವಾಗಿ ಗೋಲು ಗಳಿಸಿದರು. ನ್ಯೂಜಿಲೆಂಡ್ ತಂಡದ ರಕ್ಷಣಾ ವಿಭಾಗವು ಈ ಸಂದರ್ಭದಲ್ಲಿ ಚುರುಕುತನ ತೋರಲಿಲ್ಲ. ಅದರ ಲಾಭ ಪಡೆದ



ಅರ್ಷದೀಪ್ ಚುರುಕಾಗಿ ಚೆಂಡನ್ನು ಗೋಲುಪೆಟ್ಟಿಗೆ ಸೇರಿಸಿದರು.

ಮೊದಲ ಕ್ವಾರ್ಟರ್‌ನ ಕೊನೆಯ ಕ್ಷಣದಲ್ಲಿ ಸುನಿಲ್ ಅವರು ಪೆನಾಲ್ಟಿ ಕಾರ್ನರ್‌ನಲ್ಲಿ ಗೋಲು ಹೊಡೆದರು. ಡ್ರ್ಯಾಗ್‌ಫ್ಲಿಕರ್ ಸುನೀಲ್ ಅವರು ನಾಯಕ ರೋಹಿತ್ ಪಾಸ್ ಕೊಟ್ಟ ಚೆಂಡನ್ನು ಗೋಲುಪೆಟ್ಟಿಗೆ ಸೇರಿಸಿದರು. ಇದಕ್ಕೂ ಮುನ್ನ ಮೂರು ಪೆನಾಲ್ಟಿ ಕಾರ್ನರ್‌ಗಳಲ್ಲಿ ಗೋಲು ಹೊಡೆಯಲು ಭಾರತದ ಆಟಗಾರರಿಗೆ ಸಾಧ್ಯವಾಗಿರಲಿಲ್ಲ.

2–0 ಮುನ್ನಡೆಯೊಂದಿಗೆ ಎರಡನೇ ಕ್ವಾರ್ಟರ್‌ನಲ್ಲಿ ತಂಡವು ಕಣಕ್ಕಿಳಿಯಿತು. ಆಟಗಾರರು ಹಲವು ಬಾರಿ ಎದುರಾಳಿ ಗೋಲ್ ವೃತ್ತಕ್ಕೆ ಲಗ್ಗೆ ಹಾಕುವಲ್ಲಿ ಯಶಸ್ವಿಯಾದರು. ಅರೈಜಿತ್ ಹುಂಡಾಲ್ ಕಡೆಗೂ ಅವಕಾಶ ಗಿಟ್ಟಿಸಿದರು. ನಿಖರವಾದ ಶಾಟ್ ಪ್ರಯೋಗಿಸಿದ ಅವರು ತಂಡದ ಮುನ್ನಡೆಯನ್ನು 30ಗೆ ಹೆಚ್ಚಿಸಿದರು.

ಮೂರನೇ ಕ್ವಾರ್ಟರ್‌ನಲ್ಲಿ ಕಿವೀಸ್ ತಂಡವು ಕಡೆಗೂ ಗೋಲು ಗಳಿಸುವಲ್ಲಿ ಸಫಲವಾಯಿತು. 41ನೇ ನಿಮಿಷದಲ್ಲಿ ನೆಲ್ಸನ್ ಗೋಲು ಹೊಡೆದರು. ಆದರೆ ಅವರ ಸಂತಸ ಕೆಲವೇ ನಿಮಿಷಗಳ ಕಾಲ ಇತ್ತು. ಏಕೆಂದರೆ ಆರು ನಿಮಿಷಗಳ ನಂತರ ಭಾರತದ ರೋಶನ್ ಕುಮಾರ್ ಅವರು ಪೆನಾಲ್ಟಿ ಕಾರ್ನರ್ ಅವಕಾಶದಲ್ಲಿ ಗೋಲು ಗಳಿಸಿದರು. ಇದರಿಂದಾಗಿ ತಂಡವು 41ರ ಮುನ್ನಡೆ ಸಾಧಿಸಿತು.

ಕೊನೆಯ ಕ್ವಾರ್ಟರ್‌ನಲ್ಲಿ ನ್ಯೂಜಿಲೆಂಡ್ ಬಹಳಷ್ಟು ಪ್ರಯತ್ನಗಳನ್ನು ಮಾಡಿತು. ಪಂದ್ಯದಲ್ಲಿ ಕೊನೆಯ ಕೆಲವು ನಿಮಿಷಗಳು ಬಾಕಿ ಇದ್ದಾಗ ಏಡನ್ ಮ್ಯಾಕ್ಸ್ ಗೋಲು ಹೊಡೆಯುವಲ್ಲಿ ಸಫಲರಾದರು. ಭಾರತ ತಂಡವು ಮಂಗಳವಾರ ಪಾಕಿಸ್ತಾನ ಎದುರು ಆಡಲಿದೆ.

### ಆರ್‌ಎಸ್‌ಎಸ್ ಚಟುವಟಿಕೆ ನಿಯಂತ್ರಿಸಲು ಸಲಹೆ | ಬಿಜೆಪಿ ನಾಯಕರ ವಾಗ್ದಾಳಿ

# ವಿವಾದದ ಕಿಡಿ ಹೊತ್ತಿಸಿದ ಪ್ರಿಯಾಂಕ್ ಖರ್ಗೆ ಪತ್ರ

• ಪ್ರಜೋದಯ ವರದಿ

**ಬೆಂಗಳೂರು:** ಸರ್ಕಾರದ ಸ್ಥಳಗಳಲ್ಲಿ ಆರ್‌ಎಸ್‌ಎಸ್‌ನ ಎಲ್ಲಾ ಚಟುವಟಿಕೆಗಳನ್ನು ನಿಷೇಧಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಸಚಿವ ಪ್ರಿಯಾಂಕ್ ಖರ್ಗೆ ಪತ್ರ ಬರೆದಿದ್ದಾರೆ.

ಸಂವಿಧಾನದ ಮೌಲ್ಯಗಳನ್ನು ಗಾಳಿಗೆ ತೂರುವ ವಿಭಜಕ ಶಕ್ತಿಗಳು ತಲೆ ಎತ್ತಿದಾಗ ಅವುಗಳನ್ನು ನಿಗ್ರಹಿಸಲು ಸಂವಿಧಾನವೇ ನಮಗೆ ಶಕ್ತಿ ಮತ್ತು ಅಧಿಕಾರವನ್ನು ನೀಡುತ್ತದೆ. ಆರ್‌ಎಸ್‌ಎಸ್ ಪ್ರತಿಪಾದಿಸುವ ಮೂಲಭೂತವಾದಿ ಸಿದ್ಧಾಂತದ ಪರಿಣಾಮದಿಂದಲೇ ಇಂದು ನ್ಯಾಯಾಂಗದ ಮುಖ್ಯಸ್ಥರ ಮೇಲೆ ಶೂ ಎಸೆಯುವಂತಹ ವಾತಾವರಣ ಸೃಷ್ಟಿಯಾಗಿದೆ. ಬಾಬಾ ಸಾಹೇಬ್ ಅಂಬೇಡ್ಕರ್ ಅವರನ್ನು ನಿಂದಿಸುವ ಮನಸ್ಥಿತಿ ಬೆಳೆದಿದೆ. ಮಕ್ಕಳು ಹಾಗು ಯುವ ಸಮುದಾಯದ ಮೇಲೆ ನಕಾರಾತ್ಮಕ ಪರಿಣಾಮ ಉಂಟುಮಾಡಲು ಯತ್ನಿಸುವ ಆರ್‌ಎಸ್‌ಎಸ್‌ನ ಪ್ರಯತ್ನವನ್ನು ತಡೆಯುವ, ಸಂವಿಧಾನದ ಆಶಯ, ಏಕತೆ, ಸಮಾನತೆ, ಸಮಗ್ರತೆಯನ್ನು ಎತ್ತಿ ಹಿಡಿಯುವ ಉದ್ದೇಶದೊಂದಿಗೆ ಎಲ್ಲಾ ಸರ್ಕಾರಿ ಸಾರ್ವಜನಿಕ ಪ್ರದೇಶದಲ್ಲಿ ಆರ್‌ಎಸ್‌ಎಸ್‌ನ ಚಟುವಟಿಕೆ



ಗಳನ್ನು ನಿರ್ಬಂಧಿಸುವಂತೆ ತಮ್ಮಲ್ಲಿ ಕೋರಿಕೊಳ್ಳುತ್ತೇನೆಂದು ಪತ್ರದಲ್ಲಿ ತಿಳಿಸಿದ್ದಾರೆ. ಪ್ರಿಯಾಂಕ್ ಖರ್ಗೆ ಅವರ ಪತ್ರಕ್ಕೆ ಪ್ರತಿಕ್ರಿಯೆಯಾಗಿ ಸೂಕ್ತ ಕ್ರಮ ಜರುಗಿಸುವಂತೆ ಮುಖ್ಯ ಕಾರ್ಯದರ್ಶಿಗೆ ಸಿದ್ದರಾಮಯ್ಯ ಅವರು ಟಿಪ್ಪಣಿ ಕಳುಹಿಸಿದ್ದಾರೆ.

ಈ ಕುರಿತು ಪ್ರತಿಕ್ರಿಯಿಸಿರುವ ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಅವರು, ಜೀವನಪೂರ್ತಿ ಹಾವಿನಂತೆ ಸಂಘದ ಮೇಲೆ ವಿಷ ಕಾರುತ್ತಾ ಇದ್ದ ಕೆಲವರು ಹೊಟ್ಟೆ ಒಳಗೆ ಹುಣ್ಣಾಗಿ ಇಹಲೋಕವನ್ನೇ ತ್ಯಜಿಸಿದ್ದಾರೆ. ತಮ್ಮದು ಯಾವ ಪಾಡೋ ಕಾದು ನೋಡೋಣವೆಂದು ತಿವಿದಿದ್ದಾರೆ.

ಪ್ರಿಯಾಂಕ್ ಖರ್ಗೆ ಅವರೇ, ಯಾಕಾಗಿ ರಾಷ್ಟ್ರೀಯ ಸ್ವಯಂ ಸೇವಕ ಸಂಘವನ್ನು ನಿಷೇಧಿಸಬೇಕು ಹೇಳಿ. ಮಕ್ಕಳಲ್ಲಿ ರಾಷ್ಟ್ರಭಕ್ತಿಯ ಸಂಸ್ಕಾರವನ್ನು ನೀಡುವುದು ಅಪರಾಧವೇ. ನಾವು ರಾಷ್ಟ್ರದ ಘಟಕ ಎನ್ನುವುದನ್ನು ಅರ್ಥ ಮಾಡಿಸಿ ರಾಷ್ಟ್ರಕ್ಕೆ ಸಮರ್ಪಿಸಿಕೊಳ್ಳುವುದು ಸಂವಿಧಾನ ಬಾಹಿರವೇ. ನೀವೇಕೆ ಕಣ್ಣಿದ್ದು ಕುರುಡರಾಗಿದ್ದೀರಿ, ಕಿವಿ ಇದ್ದು ಕಿವುಡರಾಗಿದ್ದೀರಿ. ನಿಮ್ಮ ಕಲಬುರಗಿ ಜಿಲ್ಲೆಯಲ್ಲೇ ಮತಾಂಧರು ರಾಷ್ಟ್ರ ವಿರೋಧಿ ಚಟುವಟಿಕೆಗಳಲ್ಲಿ ಹಾಡು ಹಗಲೇ ತೊಡಗಿಸಿಕೊಳ್ಳುತ್ತಿರುವುದು ನಿಮಗೆ ಕಾಣುವುದಿಲ್ಲವೇ ಎಂದು ಪ್ರಶ್ನಿಸಿದ್ದಾರೆ.

ಅಂದು ವಿಧಾನಸೌಧದ ಮೊಘಸಾಲೆಯಲ್ಲಿಯೇ ಪಾಕಿಸ್ತಾನ್ ಜಿಂದಾಬಾದ್ ಎಂದು ಕೂಗಿದಾಗ ನಿಮಗೆ ಕೇಳಲಿಲ್ಲವೇ. ಆವಾಗ ಪ್ರತಿಕ್ರಿಯಿಸಲು ನಿಮ್ಮ ಬಾಯಿ ಬಿದ್ದು ಹೋಗಿತ್ತೇ. ಭಾರತ್ ಮಾತಾ ಕೀ ಜೈ ಎಂದರೆ ನಿಮ್ಮ ಪ್ರಕಾರ ಅದು ದೇಶದ್ರೋಹ. ಅದಕ್ಕಾಗಿ ಸಂಘದ ಶಾಖೆಗಳನ್ನು ನಿಷೇಧಿಸುವ ಮಾತನಾಡುತ್ತಿದ್ದೀರಿ. ಸಂಘದ ಶಾಖೆಗಳನ್ನು ನಿಷೇಧಿಸುತ್ತೇವೆಂಬ ತಿರುಕನ ಕನಸಿನಿಂದ ಮೊದಲು ಹೊರಬನ್ನಿ ಎಂದು ಆಕ್ರೋಶವ್ಯಕ್ತಪಡಿಸಿದ್ದಾರೆ.

ಸಂಘ ಇಂದು ಮನೆ ಮನೆಗಳನ್ನು ತಲುಪಿದೆ. ಹಲವು ತಲೆಮಾರುಗಳಿಂದ ಸಂಘವನ್ನು ಕಂಡರೆ ಉರಿದು ಬೀಳುತ್ತಿದ್ದ ನಿಮ್ಮವರೇ ತಮ್ಮ ಜೀವಮಾನದ ಕೊನೆಯಲ್ಲಿ ಬದಲಾಗಿ ರಾಷ್ಟ್ರೀಯ ಸ್ವಯಂಸೇವಕ ಸಂಘಕ್ಕೆ ಗಣರಾಜ್ಯದ ಪರೇಡ್‌ನಲ್ಲೂ ಭಾಗವಹಿಸಲು ಅವಕಾಶ ಕೊಟ್ಟಿದ್ದಾರೆ, ಇನ್ನೂ ಕೆಲವರು ಸಂಘ ದ್ವೇಷದಿಂದ ಹೊರಬಂದು ಸಂಘದ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಹಾಡಿ ಹೊಗಳಿದ್ದಾರೆಂದು ಎಚ್ಚರಿಸಿದ್ದಾರೆ.

### ಕಾಂಗ್ರೆಸ್‌ನ ಬೌದ್ಧಿಕ ದಾರಿದ್ರ್ಯ

ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಅವರು ಪ್ರತಿಕ್ರಿಯಿಸಿ, ಜಗತ್ತಿನ ಅತ್ಯಂತ ದೊಡ್ಡ ಸ್ವಯಂ ಸೇವಕರ ಪಡೆ ಹೊಂದಿರುವ ಆರ್‌ಎಸ್‌ಎಸ್ ನಿಷೇಧಕ್ಕೆ ಕರೆ ಕೊಟ್ಟಿರುವುದು ಕಾಂಗ್ರೆಸ್ಸಿಗರ ಬೌದ್ಧಿಕ ದಾರಿದ್ರ್ಯತನ ತೋರಿಸುತ್ತದೆಂದು ವಾಗ್ದಾಳಿ ನಡೆಸಿದ್ದಾರೆ. ಪ್ರಕೃತಿ ವಿಕೋಪ, ರೈಲು ದುರಂತ, ಕೋವಿಡ್, ಅಪಘಾತಗಳು, ಭೂಕಂಪ, ನೆರೆಯಾದಾಗ ನೊಂದವರಿಗೆ ಮೊದಲು ಆಸರೆಯಾಗುವುದು ಆರ್‌ಎಸ್‌ಎಸ್ ಸೇವಕರು. ಸೇವಾತತ್ಪರತೆ, ಸಮಾಜ ಸೇವೆ, ರಾಷ್ಟ್ರ ಪ್ರೇಮದ ಬಗ್ಗೆ ಜಾಗೃತಿ, ಶಿಸ್ತಿಗೆ ಮತ್ತೊಂದು ಹೆಸರೇ ರಾಷ್ಟ್ರೀಯ ಸ್ವಯಂ ಸೇವಕ ಸಂಘ. ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೇ ಹಗಲು ರಾತ್ರಿ ಎನ್ನದೇ ನಿಸ್ವಾರ್ಥ ಸೇವೆ ನೀಡುವ ಪ್ರಪಂಚದ ಏಕೈಕ ಸಂಘಟನೆಯಾಗಿದೆ. ಮನ ಮನೆಗಳನ್ನು ಬೆಸೆದುಕೊಳ್ಳುತ್ತಿರುವ ಸಂಘ ಚಿಂತನೆ ವ್ಯಾಪಿಸಿದ ಮತ್ತು ವ್ಯಾಪಿಸುತ್ತಿರುವ ರೀತಿ ಅನನ್ಯ ಎಂದು ಯತ್ನಾಳ ಹೇಳಿದ್ದಾರೆ. ಆರ್‌ಎಸ್‌ಎಸ್ ನಿಷೇಧ ಮಾಡಲು ಯಾರಿಂದಲೂ ಸಾಧ್ಯವಾಗಿಲ್ಲ. ವಿರೋಧಿಗಳು ಪ್ರೀತಿಸುವ, ಗೌರವಿಸುವ ಜಗತ್ತಿನ ಏಕೈಕ ಸಂಘಟನೆಯೇ ಆರ್‌ಎಸ್‌ಎಸ್. ರಾಜಕೀಯ ಪ್ರೇರಿತ ಹೇಳಿಕೆಗಳನ್ನು ಕೊಡುವುದನ್ನು ಬಿಟ್ಟು ಸ್ವಕ್ಷೇತ್ರವನ್ನು ಅಭಿವೃದ್ಧಿಗೊಳಿಸಲು ಪ್ರಿಯಾಂಕ್ ಖರ್ಗೆ ಅವರು ಶ್ರಮಿಸಲಿ ಎಂದರು.

# ಸ್ಕೌಟ್ಸ್-ಗೈಡ್ಸ್ ಇರುವುದೇ ಸಮುದಾಯದ ಸೇವೆಗಾಗಿ



• ಪ್ರಜೋದಯ ವರದಿ

**ಹಾಸನ:** ಭಾರತ್ ಸ್ಕೌಟ್ಸ್–ಗೈಡ್ಸ್ ಇರುವುದೇ ಸಮುದಾಯದ ಸೇವೆಗಾಗಿ. ಜಗತ್ತಿನ ನೂರಾರು ದೇಶಗಳಲ್ಲಿ ಸಾಮಾಜಿಕ ಸೇವೆಯಲ್ಲಿ ನಿರಂತರ ವಾಗಿ ಸಂಸ್ಥೆ ತೊಡಗಿಸಿಕೊಂಡು ಜನ ಮುಖಿ ಕಾರ್ಯವನ್ನು ಮಾಡುತ್ತಿದೆ ಎಂದು ಭಾರತ್ ಸ್ಕೌಟ್ಸ್–ಗೈಡ್ಸ್ ರಾಜ್ಯ ಸಹ ಕಾರ್ಯದರ್ಶಿ ಎಲ್.ಟಿ. ಲೋಕೇಶ್ ಅವರು ಅಭಿಪ್ರಾಯಪಟ್ಟರು.

ನಗರದ ಜೈನ ಭವನದಲ್ಲಿ ವಿವಿಧ ಜಿಲ್ಲೆಗಳಿಂದ ಸೇವಾ ಶಿಬಿರಕ್ಕೆ ಆಗಮಿಸಿದ 750ಕ್ಕೂ ಹೆಚ್ಚು ಶಿಬಿರಾರ್ಥಿ ಗಳನ್ನು ಉದ್ದೇಶಿಸಿ ಮಾತನಾಡಿದ ಅವರು, ಜಿಲ್ಲಾಡಳಿತದ ಸಹಕಾರದಲ್ಲಿ ಪ್ರತಿ ವರ್ಷದಂತೆ ಈ ವರ್ಷವೂ ಸಹ ರಾಜ್ಯ ಮಟ್ಟದ ಸೇವಾ ಶಿಬಿರ ಹಮ್ಮಿ ಕೊಂಡಿದ್ದು 40ಕ್ಕೂ ಹೆಚ್ಚಿನ ಕೇಂದ್ರ ಗಳಲ್ಲಿ ದಿನಕ್ಕೆ ಎರಡು ಪಾಳೆಯದಂತೆ ನಮ್ಮ ಮಕ್ಕಳು ಕರ್ತವ್ಯ ನಿರ್ವಹಿ ಸುತ್ತಿದ್ದಾರೆ. ಸರದಿ ಸಾಲಿನ ಶಿಸ್ತನ್ನು ಕಾಪಾಡುವುದು, ಬಾಯಾರಿದವರಿಗೆ ನೀರು ಪೂರೈಕೆ ಮಾಡುವುದು, ವಯೋ ವೃದ್ಧರನ್ನು ವ್ಹೀಲ್ ಚೇರಿನಲ್ಲಿ ಕರೆದುಕೊಂಡು ಹೋಗಿ ದರ್ಶನ ಮಾಡಿಸುವುದು, ಸ್ವಚ್ಛತಾ ಕಾರ್ಯ ಮಾಡುವುದು ಹೀಗೆ ಅನೇಕ ಕಡೆಗಳಲ್ಲಿ ಸೇವಾ ನಿರತರಾಗಿದ್ದಾರೆ. ಇದೊಂದು ಸ್ಕೌಟ್ಸ್– ಗೈಡ್ಸ್‌ಮಕ್ಕಳಿಗೆ ಪುಣ್ಯದ ಕಾರ್ಯ. ಹಾಸನಾಂಬ ಸೇವೆ ನಮ್ಮಗಳ ಸೌಭಾಗ್ಯ. ಎಲ್ಲರಿಗೂ ಈ ಅವಕಾಶ ದೊರೆಯುವುದಿಲ್ಲ. ಸಿಕ್ಕ ಅವಕಾಶವನ್ನು ಶ್ರದ್ಧೆಯಿಂದ ನಿರ್ವಹಿಸಿ ಸಂಸ್ಥೆ ಹಾಗೂ ಜಿಲ್ಲಾಡಳಿತಕ್ಕೆ ಕೀರ್ತಿ ತರಬೇಕೆಂದರು.

ರೋವರ್ ರೇಂಜರ್ ವಿಭಾಗದ ಹೆಡ್ ಕ್ವಾರ್ಟರ್ ಕಮಿಷನರ್ ಡಾ. ಜಿ.ಡಿ.ನಾರಾಯಣ, ಜಿಲ್ಲಾ ಕಾರ್ಯದರ್ಶಿ ಸುರೇಶ್ ಗುರೂಜಿ, ರಾಜ್ಯ ಸಹಾಯಕ ಸಂಘಟನಾ ಆಯುಕ್ತೆ ಎಚ್.ಎಂ.ಪ್ರಿಯಾಂಕ, ಬೆಂಗಳೂರು ಎ.ಎಸ್.ಒ.ಸಿ. ನಿತಿನ್ ಅಮೀನ್, ಜಿಲ್ಲಾ ಖಜಾಂಚಿ ಆರ್.ಎಸ್.ರಮೇಶ್, ಏಕಲವ್ಯ ರೋವರ್ ನಾಯಕ ಆರ್.ಜಿ. ಗಿರೀಶ್, ಪದಾಧಿ ಕಾರಿಗಳು, ವಿವಿಧ ತಾಲ್ಲೂಕು ಕಾರ್ಯದರ್ಶಿಗಳು ಇತರರು ಉಪಸ್ಥಿತರಿದ್ದರು.

# ಬೇರ್ಪಟ್ಟ ಮರಿಗಳು ತಾಯಿ ಚಿರತೆ ಸುಪರ್ದಿಗೆ


• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ತಾಯಿಯಿಂದ ಬೇರ್ಪಟ್ಟಿದ್ದ ಮೂರು ಮರಿಗಳನ್ನು ತಾಯಿ ಚಿರತೆಗೆ ಒಪ್ಪಿಸುವಲ್ಲಿ ಅರಣ್ಯ ಇಲಾಖೆ ಯಶಸ್ವಿಯಾಗಿದ್ದು, ಅದಕ್ಕಾಗಿ ನಡೆಸಿದ ತಂತ್ರಗಳು ರಣರೋಚಕವಾಗಿವೆ.

ತಾಲ್ಲೂಕಿನ ಬೇಡಿಗನಹಳ್ಳಿ ಗ್ರಾಮದ ಚೆಲುವೇಗೌಡ ಎಂಬುವವರ ಕಬ್ಬಿನ ತೋಟದಲ್ಲಿ ಅ. 2 ರಂದು ಮೂರು ಮರಿಗಳಿಗೆ ಚಿರತೆ ಜನ್ಮ ನೀಡಿತ್ತು. ಕಬ್ಬು ಕಟಾವು ಕಾರ್ಯ ಆರಂಭಿಸಿದಾಗ ತಾಯಿ ಚಿರತೆ ಹೆದರಿ ಮರಿಗಳನ್ನು ಅಲ್ಲೇ ಬಿಟ್ಟು ಹೋಗಿತ್ತು. ಕಬ್ಬು ಕಟಾವು ಕಾರ್ಮಿಕರು ಅವುಗಳನ್ನು ಮನೆಗೆ ತೆಗೆದುಕೊಂಡು ಹೋಗಿ ಅರಣ್ಯ ಇಲಾಖೆ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದರು. ಸ್ಥಳಕ್ಕೆ ಆಗಮಿಸಿದ ಉಪ ಅರಣ್ಯ ಸಂರಕ್ಷಣಾಧಿಕಾರಿ ಸೌರಬ್‌ಕುಮಾರ್ ಹಾಗು ಡಿಆರ್‌ಎಫ್‌ಓ ಶಂಕರ್, ಸಿಬ್ಬಂದಿ ಮರಿಗಳ ಆರೈಕೆ ಮಾಡಿ ತಾಯಿ ಜೊತೆಗೆ ಸೇರಿಸಿದ್ದಾರೆ.

**ಮರದ ಪೆಟ್ಟಿಗೆಯಲ್ಲಿ ವಾಸ**

ಕಬ್ಬಿನ ಗದ್ದೆಯಿಂದ ಮನೆಗೆ ತೆಗೆದುಕೊಂಡು ಹೋಗಿದ್ದ ಮರಿ ಚಿರತೆಗಳನ್ನು ವಶಕ್ಕೆ ಪಡೆದಿದ್ದ ಅರಣ್ಯ ಇಲಾಖೆ ಸಿಬ್ಬಂದಿ ಮರದ ಪೆಟ್ಟಿಗೆಯೊಂದರಲ್ಲಿ ಹಾಕಿ ತಾಯಿ ಚಿರತೆ ಬರಬಹುದೆಂಬ ನಿರೀಕ್ಷೆಯಿಂದ ಜನ್ಮ ಪಡೆದ ಸ್ಥಳದಲ್ಲೇ ಇಟ್ಟಿದ್ದರು. ಕರುಳ ಕುಡಿಗಳ ಚೀರಾಟ ಶಬ್ದ ಕೇಳಿದ್ದ ತಾಯಿ ಚಿರತೆ ಮೊದಲ ದಿನ ಬಂದು ಒಂದು ಮರಿಯನ್ನು ಎತ್ತಿಕೊಂಡು ಹೋಗಿತ್ತು. ಅದನ್ನು ಗಮನಿಸಿದ ಅರಣ್ಯ ಇಲಾಖೆ ಸಿಬ್ಬಂದಿ ಉಳಿದ ಎರಡು ಮರಿಗಳಿಗೆ ನಿಪ್ಪಲ್ ಸಹಾಯದಿಂದ ಹಾಲುಣಿಸಿ ಪೋಷಿಸಿದ್ದರು. ಮತ್ತೆ ಎರಡು ದಿನಗಳ ಬಳಿಕ ಬಂದಿದ್ದ ಚಿರತೆ ಮತ್ತೊಂದು ಮರಿಯನ್ನು ಹೊತ್ತೊಯ್ದಿದೆ. ಉಳಿದ ಒಂದು ಮರಿಯನ್ನು ಕರೆದೊಯ್ಯಲು ಆರು ದಿನಗಳಾದರೂ ಬರಲಿಲ್ಲ.



ಹುಟ್ಟಿದ ಆರು ದಿನವಾದರೂ ತಾಯಿ ಚಿರತೆ ಜೊತೆಗೆ ಸೇರದ ಮರಿಯನ್ನು ಹೇಗಾದರೂ ಮಾಡಿ ಸೇರಿಸಬೇಕೆಂದು ಪಣ ತೊಟ್ಟಿದ್ದ ಅರಣ್ಯ ಇಲಾಖೆ ಅಧಿಕಾರಿಗಳು ತಾಯಿ ಚಿರತೆಯ ಜಾಡು ಹಿಡಿದು ಹೊರಟರು. ಅದಕ್ಕಾಗಿ ಭದ್ರಾ ಅರಣ್ಯದಿಂದ ಶ್ವಾನದಳವನ್ನು ಕರೆಸಿಕೊಂಡರು.

ಚಿರತೆ ಹೆಜ್ಜೆಯ ಜಾಡು ಹಿಡಿದ ಶ್ವಾನ ಒಂದು ಕಿ.ಮೀ. ವರೆಗೆ ಸಾಗಿ ನಿಂತಿತು. ನಂತರ ಥರ್ಮಲ್ ಡ್ರೋನ್ ಹಾರಿಸಿ ಎರಡು ಮರಿಗಳ ಜೊತೆ ತಾಯಿ ಚಿರತೆ ಇರುವುದನ್ನು ಪತ್ತೆ ಹಚ್ಚಿದರು. ಅಲ್ಲೇ ಹತ್ತಿರದಲ್ಲಿ ಕಡಿಮೆ ಹಾಲುಣಿಸಿ ಮರಿಯನ್ನು ಬಿಡಲಾಗಿತ್ತು. ಮಧ್ಯರಾತ್ರಿ ಮರಿಯ ಕಿರುಚಾಟ ಕೇಳಿದ ತಾಯಿ ಚಿರತೆ ಅಲ್ಲಿಗೆ ಬಂದು ಅದನ್ನು ಎತ್ತಿಕೊಂಡು ಹೋಗಿದೆ. ತಾಯಿ ಚಿರತೆ ಹಾಗು ಮರಿಗಳನ್ನು ಒಂದುಗೂಡಿಸುವಲ್ಲಿ ಅರಣ್ಯ ಇಲಾಖೆ ಅಧಿಕಾರಿಗಳು ಒಂದು ವಾರಗಳ ಕಾಲ ನಡೆಸಿದ ಪ್ರಯತ್ನ ಕೊನೆಗೂ ಸಫಲಗೊಂಡಿದೆ.

## ಸೆರೆ ಸಿಕ್ಕ ಕಾಡುಕೋಣ ಅರಣ್ಯಕ್ಕೆ ಬಿಡುವ ಮುನ್ನ ಸಾವು

• ಪ್ರಜೋದಯ ವರದಿ

ಚನ್ನರಾಯಪಟ್ಟಣ: ಪಟ್ಟಣದಲ್ಲಿ ಶನಿವಾರ ಮೂರು ಬಾರಿ ಅರವಳಿಕೆ ಚುಚ್ಚುಮದ್ದು ನೀಡಿ ಸೆರೆ ಹಿಡಿಯಲಾಗಿದ್ದ ಕಾಡುಕೋಣ ಅರಣ್ಯ ಪ್ರದೇಶಕ್ಕೆ ಕರೆದೊಯ್ಯುತ್ತಿದ್ದಾಗ ಮಾರ್ಗಮಧ್ಯೆ ಮೃತಪಟ್ಟಿದೆ.

ಅಂದಾಜು ನಾಲ್ಕು ವರ್ಷದ ಕಾಡುಕೋಣ ಶನಿವಾರ ಬೆಳಿಗ್ಗೆ ಪಟ್ಟಣದ ವಿದ್ಯಾನಗರದಲ್ಲಿ ಸಾರ್ವಜನಿಕರ ಮೇಲೆ ದಾಳಿ ನಡೆಸಿತ್ತು. ಶಾಂತಮ್ಮ ಎಂಬುವವರ ಮೇಲೆ ಎರಗಿ ಗಂಭೀರ ಗಾಯಗೊಳಿಸಿದ್ದು ಮಾತ್ರವಲ್ಲದೆ ಒಂದು ಕಾರು ಹಾಗು ಮೂರು ಬೈಕ್‌ಗಳನ್ನು ಜಖಂಗೊಳಿಸಿತ್ತು. ಕಾಡುಕೋಣದ ಉಪಟಳ ಸುದ್ದಿ ತಿಳಿದು ಸ್ಥಳಕ್ಕೆ ಧಾವಿಸಿದ ಉಪ ಸಂರಕ್ಷಣಾಧಿಕಾರಿ ಸೌರಭ್ ಕುಮಾರ್ ಹಾಗು ನೌಕರರು ಇಡೀ ದಿನ ಕಾರ್ಯಾಚರಣೆ ಸಂಜೆ ವೇಳೆಗೆ ಸೆರೆ ಹಿಡಿದಿದ್ದರು. ಆದರೆ, ಮೂರು ಬಾರಿ ಅರವಳಿಕೆ ಚುಚ್ಚುಮದ್ದು ನೀಡಿದ್ದರಿಂದ ನಿತ್ರಾಣಗೊಂಡಿದ್ದ ಕಾಡುಕೋಣ ಉಸಿರಾಟ ಸಮಸ್ಯೆಯಿಂದ ಮೃತಪಟ್ಟಿದೆ.

ವಿದ್ಯಾನಗರದ ಮಂಟಿಯಲ್ಲಿ ಹಂದಿಜೋಗಿ ಸಮುದಾಯದ ಶಾಂತಮ್ಮ ಅವರು ಹಂದಿ ಮೇಯಿಸಲು ಬಂದಿದ್ದಾಗ ಹಂದಿಗಳಿರುವ ಜಾಗಕ್ಕೆ ಕಾಡುಕೋಣ ಬಂದಿತ್ತು. ಎಮ್ಮೆ ಎಂದು ತಿಳಿದು ಅದನ್ನು ಓಡಿಸಲು ಮುಂದಾದಾಗ ಅವರ ಮೇಲೆ ದಾಳಿ ನಡೆಸಿತ್ತು. ಮಹಿಳೆಯ ಎಡಗೈ ಮುರಿದಿದ್ದು ಅವರನ್ನು ಹಿಮ್ಸ್‌ಗೆ ದಾಖಲಿಸಲಾಗಿದೆ.

ನಂತರ ಮುಳ್ಳಿನ ಪೊದೆಯೊಳಗೆ



ಸೇರಿಕೊಂಡಿದ್ದ ಕಾಡುಕೋಣವನ್ನು ಹೊರಗೆ ಬರದಂತೆ ಅರಣ್ಯ ಇಲಾಖೆ ಸಿಬ್ಬಂದಿ ಕ್ರಮ ವಹಿಸಿದ್ದರು. ಮಧ್ಯಾಹ್ನದ ಹೊತ್ತಿಗೆ ಎಲ್ಲಾ ಸಿದ್ಧತೆ ಮಾಡಿಕೊಂಡ ಅರಣ್ಯ ಇಲಾಖೆ ಸಿಬ್ಬಂದಿ ಕಾರ್ಯಾಚರಣೆ ನಡೆಸಿದ್ದರು.

ಮೊದಲ ಅರವಳಿಕೆ ಚುಚ್ಚುಮದ್ದಿಗೆ ಆಕ್ರೋಶಗೊಂಡ ಕಾಡುಕೋಣ ಮತ್ತೆ ಆರ್ಭಟ ಶುರು ಮಾಡಿದ್ದರಿಂದ ಮತ್ತೊಂದು ಡೋಸ್ ನೀಡಲಾಯಿತು. ಅದರಿಂದ ನಿತ್ರಾಣಗೊಂಡು ಕೆಳಗೆ ಬಿದ್ದಿತು. ಕ್ರೇನ್ ಮೂಲಕ ಲಾರಿಗೆ ಹಾಕುತ್ತಿದ್ದಂತೆ ಎಚ್ಚರಗೊಂಡು ಏಕಾಏಕಿ ಲಾರಿಯಿಂದ ಜಿಗಿದು ಪಟ್ಟಣದೊಳಗೆ ಓಡುವ ಪ್ರಯತ್ನ ಮಾಡಿತಾದರೂ ಮತ್ತೆ ಅರವಳಿಕೆ ಚುಚ್ಚುಮದ್ದು ನೀಡಿ ಸುಮ್ಮನಾಗಿಸಲಾಯಿತು. ಕಾಡುಕೋಣಗಳು ಹೆಚ್ಚಾಗಿ ವಾಸಿಸುವ ಪಶ್ಚಿಮಘಟ್ಟ ಅರಣ್ಯಕ್ಕೆ ಬಿಡಲು ಹೋಗಲಾಯಿತಾದರೂ ಅಸ್ವಸ್ಥಗೊಂಡು ಮೃತಪಟ್ಟಿದೆ. ಮರಣೋತ್ತರ ಪರೀಕ್ಷೆ ಬಳಿಕ ಅಂತ್ಯಕ್ರಿಯೆ ನೆರವೇರಿಸಲಾಯಿತು.

# ಸಿಎಂ ಔತಣ ಕೂಟ ಕುತೂಹಲ

• ಪ್ರಜೋದಯ ವರದಿ

**ಬೆಂಗಳೂರು :** ರಾಜ್ಯ ಕಾಂಗ್ರೆಸ್‌ನಲ್ಲಿ ಅಧಿಕಾರ ಹಂಚಿಕೆ, ಸಂಪುಟ ಪುನಾರಚನೆಯ ಚರ್ಚೆಗಳು ಮುನ್ನೆಲೆಗೆ ಬಂದಿರುವಾಗಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ಸಚಿವ ಸಂಪುಟದ ಎಲ್ಲಾ ಸಚಿವರಿಗೆ ನಾಳೆ ಆಯೋಜಿಸಿರುವ ಔತಣಕೂಟ ರಾಜಕೀಯವಾಗಿ ಭಾರೀ ಮಹತ್ವ ಪಡೆದುಕೊಂಡಿರುವ ಜೊತೆಗೆ ರಾಜಕೀಯವಾಗಿಯೂ ಕುತೂಹಲ ಮೂಡಿಸಿದೆ.

ರಾಜ್ಯದಲ್ಲಿ ಏನೇ ರಾಜಕೀಯ ಬದಲಾವಣೆಗಳಾದರೂ ಅದು ಬಿಹಾರ ವಿಧಾನಸಭಾ ಚುನಾವಣೆಯ ನಂತರವೇ ಅಂದರೆ ನವೆಂಬರ್ ಅಂತ್ಯಕ್ಕೆ ಎಂಬುದು ಸ್ಪಷ್ಟವಾಗಿದ್ದು, ಈಗಿನಿಂದಲೇ ಸಚಿವರುಗಳ ವಿಶ್ವಾಸಗಳಿಸಿ, ಮುಂದೆ ರಾಜಕೀಯ ಪಲ್ಲಟಗಳು ಸಂಭವಿಸಿದರೆ ಆ ಸಂದರ್ಭದಲ್ಲಿ ಸಚಿವರುಗಳು ತಮ್ಮ ಪರ ದೃಢವಾಗಿ ನಿಲ್ಲುವಂತಹ ವಾತಾವರಣವನ್ನು ರೂಪಿಸಿಕೊಳ್ಳಲು ಸಚಿವರ ಔತಣಕೂಟವನ್ನು ಮುಖ್ಯಮಂತ್ರಿಗಳು ಕರೆದಿದ್ದಾರೆಂದು ಹೇಳಲಾಗುತ್ತಿದೆ.

ರಾಜ್ಯದ ಕಾಂಗ್ರೆಸ್ ಸರ್ಕಾರ ಎರಡೂವರೆ ವರ್ಷ ಪೂರೈಸಿರುವ ಬೆನ್ನಲ್ಲೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಬಣದವರ ಅಧಿಕಾರ ಹಂಚಿಕೆಯ ಕೂಗು ಬಲ ಪಡೆದಿರುವ ನಡುವೆಯೇ ಮುಖ್ಯಮಂತ್ರಿ ಸಿದ್ದರಾಮಯ್ಯ ಬಣದವರು ಸಂಪುಟ ಪುನಾರಚನೆಯ ದಾಳ ಉರುಳಿಸಿದ್ದಾರೆ.

ಈ ಎಲ್ಲದರ ಮಧ್ಯೆಯೇ ಮುಖ್ಯಮಂತ್ರಿ ಸಿದ್ದರಾಮಯ್ಯನವರು



ಸೋಮವಾರ ರಾತ್ರಿ ತಮ್ಮ ಅಧಿಕೃತ ನಿವಾಸ ಕಾವೇರಿಯಲ್ಲಿ ಎಲ್ಲ ಸಚಿವರಿಗೆ ಔತಣಕೂಟ ಆಯೋಜಿಸಿ, ಖುದ್ದು ಸಚಿವರೆಲ್ಲರಿಗೂ ಈ ಔತಣಕೂಟಕ್ಕೆ ಬರುವಂತೆ ಆಹ್ವಾನವನ್ನು ನೀಡಿದ್ದಾರೆ. ಅಧಿಕಾರ ಹಂಚಿಕೆಯ ಕೂಗಿಗೆ ತಡೆ ಹಾಕಿ ಮುಂದಿನ ಎರಡೂವರೆ ವರ್ಷ ಅಧಿಕಾರದಲ್ಲಿ ಮುಂದುವರೆಯಲು ಸಂಪುಟ ಪುನಾರಚನೆಯ ದಾಳ ಉರುಳಿಸಿ ಸಚಿವರು ಹಾಗೂ ಶಾಸಕರನ್ನು ಹಿಡಿದಿಟ್ಟುಕೊಂಡು ತಮ್ಮ ಬಲ ಹೆಚ್ಚಿಸಿಕೊಳ್ಳುವ ತಂತ್ರದ ಭಾಗವಾಗಿಯೇ ಮುಖ್ಯಮಂತ್ರಿ ಸಿದ್ದರಾಮಯ್ಯ ಸಚಿವರಿಗೆ ಔತಣಕೂಟವನ್ನು ಆಯೋಜಿಸಿದ್ದಾರೆಂದು ಹೇಳಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯನವರು ಕರೆದಿರುವ ಔತಣಕೂಟದಲ್ಲಿ ಪ್ರಸಕ್ತ ರಾಜಕೀಯ ವಿದ್ಯಮಾನಗಳು ಸೇರಿ ಹತ್ತು ಹಲವು ವಿಚಾರಗಳು ಚರ್ಚೆಗೆ ಬರುವ ಸಾಧ್ಯತೆ ಇದ್ದು, ಈ ಔತಣಕೂಟ ರಾಜಕೀಯವಾಗಿ ಮಹತ್ವ ಪಡೆದುಕೊಂಡಿದೆ. ಮುಂದೆ ನಡೆಯುವ ಸಚಿವ ಸಂಪುಟ ಪುನಾರಚನೆ ಸಂದರ್ಭದಲ್ಲಿ ಸುಮಾರು 10 ರಿಂದ 12 ಹಿರಿಯ ಸಚಿವರನ್ನು ಪಕ್ಷದ ಕೆಲಸಕ್ಕೆ ನಿಯೋಜಿಸಿ ಹೊಸ ಮುಖಗಳಿಗೆ ಆದ್ಯತೆ ಕೊಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ಚಿಂತನೆ ನಡೆಸಿದ್ದಾರೆಂದು ಹೇಳಲಾಗಿದ್ದು, ಸಚಿವ ಸ್ಥಾನದಿಂದ ಕೈ ಬಿಡುವವರನ್ನು ಮನವೊಲಿಸಿ ಅವರಿಗೆ ವಸ್ತುಸ್ಥಿತಿಯನ್ನು ವಿವರಿಸಲು ಸಚಿವರ ಔತಣಕೂಟವನ್ನು ಮುಖ್ಯ ಮಂತ್ರಿಗಳು ಬಳಸಿಕೊಳ್ಳಲಿದ್ದಾರೆಂದು ಹೇಳಲಾಗುತ್ತಿದೆ.

ಜೊತೆಗೆ ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕ ಸಮೀಕ್ಷೆಗೆ ಸಂಬಂಧಿಸಿದಂತೆ ಕೆಲ ಸಚಿವರುಗಳು ಅಸಮಾಧಾನ ಹೊರ ಹಾಕಿರುವ ಹಿನ್ನಲೆಯಲ್ಲಿ ಅವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅವರ ಅಸಮಧಾನ, ಮುನಿಸನ್ನು ಸರಿಪಡಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಈ ಔತಣಕೂಟ ಆಯೋಜಿಸಿದ್ದು, ಎಲ್ಲಾ ಸಚಿವರ ಜತೆ ಖುದ್ದು ಮಾತನಾಡಿ ಅವರ ಬೆಂಬಲ, ವಿಶ್ವಾಸವನ್ನು ಗಿಟ್ಟಿಸಿಕೊಳ್ಳುವ ಲೆಕ್ಕಾಚಾರವನ್ನು ಈ ಔತಣಕೂಟದ ಹಿಂದಿದೆ ಎಂದು ಹೇಳಲಾಗುತ್ತಿದೆ.ಈ ಔತಣಕೂಟ ವಿಶೇಷವೇನಲ್ಲ, ರಾಜಕೀಯ ಉದ್ದೇಶದಿಂದಲೂ ಕೂಡಿಲ್ಲ. ಸಚಿವರುಗಳಿಗೆ ಬಹಳ ದಿನ ಗಳಿಂದ ಮುಖ್ಯಮಂತ್ರಿಗಳು ಔತಣ ಕೂಟ ಏರ್ಪಡಿಸಿರಲಿಲ್ಲ, ಹಾಗಾಗಿ ಔತಣ ಕೂಟ ಏರ್ಪಡಿಸಿದ್ದಾರೆ. ಇದಕ್ಕೆ ರಾಜಕೀಯ ಮಹತ್ವ ಇಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆಪ್ತರು ಪ್ರತಿಪಾದಿ ಸುತ್ತಿದ್ದಾರಾದರೂ ಮುಖ್ಯಮಂತ್ರಿಗಳ ಔತಣಕೂಟ ಮುಂದೆ ರಾಜ್ಯದಲ್ಲಿ ನಡೆಯುವ ರಾಜಕೀಯ ಪಲ್ಲಟದ ಮುನ್ನುಡಿ ಎಂದೇ ವ್ಯಾಖ್ಯಾನಿಸಲಾಗುತ್ತಿದೆ.

## ಆರ್‌ಎಸ್‌ಎಸ್ ಚಟುವಟಿಕೆಗೆ ನಿಷೇಧ: ಮೂರ್ಖತನದ ಪರಮಾವಧಿ

• ಪ್ರಜೋದಯ ವರದಿ

**ಸಕಲೇಶಪುರ:** ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಹಿನ್ನಲೆ, ಸಮಾಜ ಸೇವಾ ಚಟುವಟಿಕೆಗಳ ಮಾಹಿತಿ ಕೊರತೆ ಇರುವವರು ಪುಕ್ಕಟೆ ಪ್ರಚಾರಕ್ಕಾಗಿ ಬಾಯಿಗೆ ಬಂದಂತೆ ಮಾತನಾಡುತ್ತಾರೆಂದು ಬಿಜೆಪಿ ರಾಜ್ಯ ಎಸ್‌ಸಿ ಮೋರ್ಚಾ ರಾಜ್ಯಾಧ್ಯಕ್ಷ ಸಿಮೆಂಟ್ ಮಂಜು ಅವರು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ತಿರುಗೇಟು ನೀಡಿದ್ದಾರೆ.

ಸುದ್ದಿಗಾರರೊಂದಿಗೆ ಭಾನುವಾರ ಮಾತನಾಡಿದ ಅವರು, ರಾಷ್ಟ್ರೀಯ ಸ್ವಯಂ ಸೇವಕ ಸಂಘ ದೇಶ ಸೇವೆ ನಿರಂತವಾಗಿ ಮಾಡುತ್ತ ನೂರು ವರ್ಷ ಪೂರೈಸಿದೆ. ಸರ್ಕಾರಿ ಸ್ಥಳಗಳಲ್ಲಿ ನಡೆಸುವ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಶಾಖೆ, ಪಥಸಂಚಲನ, ಬೈಠಕ್‌ಗಳನ್ನು ನಿಷೇಧಿಸಬೇಕೆಂದು ಸಚಿವ ಪ್ರಿಯಾಂಕ್ ಖರ್ಗೆ ಮುಖ್ಯಮಂತ್ರಿಗೆ ಪತ್ರ ಬರೆದಿದ್ದಾರೆ. ಜಗತ್ತಿನ ಅತ್ಯಂತ ದೊಡ್ಡ ಸ್ವಯಂ ಸೇವಕರ ಪಡೆ ಹೊಂದಿರುವ ಆರ್‌ಎಸ್‌ಎಸ್ ನಿಷೇ ಧಕ್ಕೆ ಕರೆ ಕೊಟ್ಟಿರುವುದು ಮೂರ್ಖ ತನದ ಪರಮಾವಧಿ ಎಂದರು.



ಪ್ರಕೃತಿ ವಿಕೋಪ, ರೈಲು ದುರಂತ, ಕೋವಿಡ್, ಅಪಘಾತ, ಭೂಕಂಪ, ನೆರೆ ಸಂದರ್ಭದಲ್ಲಿ ನೊಂದವರಿಗೆ ಮೊದಲು ಆಸರೆಯಾಗುವುದು ರಾಷ್ಟ್ರೀಯ ಸ್ವಯಂ ಸೇವಕ ಸಂಘ. ಸೇವಾತತ್ಪರತೆ, ಸಮಾಜ ಸೇವೆ, ರಾಷ್ಟ್ರ ಪ್ರೇಮದ ಬಗ್ಗೆ ಜಾಗೃತಿ, ಶಿಸ್ತಿಗೆ ಮತ್ತೊಂದು ಹೆಸರೇ ಆರ್‌ಎಸ್‌ಎಸ್. ಯಾವ ಪ್ರತಿಫಲಾಪೇಕ್ಷೆ ಇಲ್ಲದೇ ನಿಸ್ವಾರ್ಥ ಸೇವೆ ಸಲ್ಲಿಸುವ ಪ್ರಪಂಚದ ಏಕೈಕ ಸಂಘಟನೆಯಾಗಿದೆ. ಸಂಘವನ್ನು ನಿಷೇಧ ಮಾಡಲು ಯಾರಿಂದಲೂ ಸಾಧ್ಯವಿಲ್ಲ. ವಿರೋಧಿಗಳು ಪ್ರೀತಿಸುವ, ಗೌರವಿಸುವ ಜಗತ್ತಿನ ಏಕೈಕ ಸಂಘಟನೆಯೇ ಆರ್‌ಎಸ್‌ಎಸ್. ರಾಜಕೀಯ ಪ್ರೇರಿತ ಹೇಳಿಕೆಗಳನ್ನು ಕೊಡುವುದನ್ನು ಬಿಟ್ಟು ಸಚಿವರಾಗಿ ರಾಜ್ಯದ ಅಭಿವೃದ್ಧಿ ಕಡೆ ಗಮನ ಕೊಡಲಿ ಎಂದು ಸಲಹೆ ನೀಡಿದರು.

## ಋತುಚಕ್ರ ರಜೆ ಸರ್ಕಾರದ ನಿರ್ಧಾರ ಸ್ವಾಗತಾರ್ಹ

• ಪ್ರಜೋದಯ ವರದಿ

**ಹಾಸನ:** ರಾಜ್ಯದಾದ್ಯಂತ ಸರ್ಕಾರಿ ಕಚೇರಿಗಳು, ಐ.ಟಿ ಕಂಪನಿಗಳು, ಗಾರ್ಮೆಂಟ್ಸ್ ಮತ್ತು ಇತರೆ ಖಾಸಗಿ ಕೈಗಾರಿಕೆಗಳು ಸೇರಿ ಎಲ್ಲಾ ರಂಗದಲ್ಲಿ ಕೆಲಸ ಮಾಡುವ ಮಹಿಳೆಯರಿಗೆ ಪ್ರತಿ ತಿಂಗಳು ಒಂದು ದಿನದ ವೇತನ ಸಹಿತ ಋತು ಚಕ್ರ ರಜೆ ನೀಡಲು ಸಚಿವ ಸಂಪುಟದ ಐತಿಹಾಸಿಕ ನಿರ್ಧಾರ ಸ್ವಾಗತಾರ್ಹವಾದದ್ದೆಂದು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷೆ ಚೈತ್ರ ನಾಯಕರಹಳ್ಳಿ ಅವರು ತಿಳಿಸಿದ್ದಾರೆ.


ಮಹಿಳೆಯರ ಬಗ್ಗೆ ಕಾಳಜಿ ವಹಿಸಿ ರಾಜ್ಯ ಸರ್ಕಾರ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನಿಸಿ ಈ ರೀತಿಯ ಐತಿಹಾಸಿಕ ನಿರ್ಧಾರವನ್ನು ಕೈಗೊಂಡಂತಹ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಧನ್ಯ ತಿಳಿಸಿದ್ದಾರೆ. ಭಾನುವಾರ ಕಾರ್ಮಿಕ ಸಚಿವ ಸಂತೋಷ್ ಲಾಡ್ ಅವರನ್ನು ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ರಾಜ್ಯಾಧ್ಯಕ್ಷ ಚಂದ್ರಶೇಖರ್ ನುಗ್ಗಲಿ, ಪ್ರಧಾನ ಕಾರ್ಯದರ್ಶಿ ಸಿದ್ದಪ್ಪ ಸಂಗಣ್ಣ, ನಾಯಕರಹಳ್ಳಿ ಮಂಜೇಗೌಡ ಮುಂತಾದವರು ಅವರನ್ನು ಸನ್ಮಾನಿಸಿ



ಅಭಿನಂದನೆ ತಿಳಿಸಲಾಯಿತು.

ಸರ್ಕಾರಿ ನೌಕರರಲ್ಲಿ ಹೆಚ್ಚು ಪ್ರಾಥಮಿಕ ಶಾಲೆಗಳಲ್ಲಿ 90 ಸಾವಿರಕ್ಕೂ ಹೆಚ್ಚು ಮಹಿಳಾ ಶಿಕ್ಷಕರಿದ್ದು ಆ ಮಹಿಳಾ ಶಿಕ್ಷಕರ ಪರ ನಿಂತು, ವೇತನ ಸಹಿತವಾಗಿ ಋತು ಚಕ್ರ ರಜೆ ಸೌಲಭ್ಯವನ್ನು ಮಹಿಳೆಯರಿಗೆ ಕೊಡಿಸಬೇಕೆಂದು ಸರ್ಕಾರದ ಗಮನ ಸೆಳೆಯಲಾಗಿತ್ತು. ಇದೀಗ ಋತು ಚಕ್ರ ರಜೆಯು ಎಲ್ಲಾ ಮಹಿಳಾ ಉದ್ಯೋಗಸ್ಥ ಮಹಿಳೆಯರಿಗೆ ವೇತನ ಸಹಿತ ರಜೆ ಸಿಕ್ಕಿರುವುದು ಒಳ್ಳೆಯ ನಿರ್ಧಾರವಾಗಿದೆ ಎಂದು ತಿಳಿಸಿದ್ದಾರೆ.

## ರಾಜ್ಯೋತ್ಸವ ಪ್ರಶಸ್ತಿ ಆಯ್ಕೆ ಸಮಿತಿಗೆ ಗುಜ್ಜಾರಪ್ಪ



ಬೆಂಗಳೂರು: ರಾಜ್ಯೋತ್ಸವ ಪ್ರಶಸ್ತಿ ಆಯ್ಕೆ ಸಲಹಾ ಸಮಿತಿಗೆ ಹಿರಿಯ ವ್ಯಂಗ್ಯಚಿತ್ರಕಾರ ಬಿ.ಜಿ. ಗುಜ್ಜಾರಪ್ಪ ಅವರನ್ನು ಆಯ್ಕೆ ಮಾಡಲಾಗಿದೆ.

ಗುಜ್ಜಾರಪ್ಪ ಅವರು ಪ್ರಜಾವಾಣಿ, ಡೆಕ್ಕನ್ ಹೆರಾಲ್ಡ್, ಲಂಕೇಶ್ ಪತ್ರಿಕೆ, ಬ್ಯುಸ್ನೆಸ್ ಸ್ಟಾಂಡರ್ಡ್ ಪತ್ರಿಕೆಗಳಲ್ಲಿ ಹಲವು ವರ್ಷಗಳಿಂದ ವ್ಯಂಗ್ಯಚಿತ್ರಕಾರರಾಗಿ ಸೇವೆ ಸಲ್ಲಿಸಿದ್ದಾರೆ. ಶ್ರೀಯುತರಿಗೆ ಕೆಂಪೇಗೌಡ ಪ್ರಶಸ್ತಿ, ಲಲಿತಾಕಲಾ ಅಕಾಡೆಮಿ ಪ್ರಶಸ್ತಿ, ಮಾಧ್ಯಮ ಅಕಾಡೆಮಿ ಪ್ರಶಸ್ತಿ ಸಂದಿವೆ . ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರ ವ್ಯಂಗ್ಯ ಭಾವಚಿತ್ರ ಅವರ ಮನೆಯಲ್ಲಿ ಅನಾವರಣಗೊಂಡಿರುವುದು ಕಲಾ ಕೌಶಲ್ಯಕ್ಕೆ ನಿದರ್ಶನ.

ರಾಜ್ಯೋತ್ಸವ ಪ್ರಶಸ್ತಿ ಆಯ್ಕೆ ಸಮಿತಿಗೆ ಆಯ್ಕೆಯಾಗಿರುವ ಗುಜ್ಜಾರಪ್ಪ ಅವರಿಗೆ ರಾಜ್ಯ ವ್ಯಂಗ್ಯಚಿತ್ರಕಾರರ ಸಂಘದ ಅಧ್ಯಕ್ಷ ವೈ.ಎಸ್. ನಂಜುಂಡಸ್ವಾಮಿ, ಕಾರ್ಯದರ್ಶಿ ನಾಗಾನಾಥ್, ಕಾರ್ಯದರ್ಶಿ ಎಂ.ವಿ.ಶಿವರಾಂ ಮತ್ತು ಕಾರ್ಯಕಾರಿ ಸಮಿತಿ ಸದಸ್ಯರು ಅಭಿನಂದಿಸಿದ್ದಾರೆ.

## ಫೈನಾನ್ಸ್ ಕಿರುಕುಳ: ವಿಷ ಸೇವಿಸಿದ್ದ ಮಹಿಳೆ ಸಾವು



• ಪ್ರಜೋದಯ ವರದಿ

**ಸಕಲೇಶಪುರ:** ಫೈನಾನ್ಸ್ ಸಂಸ್ಥೆಯ ಕಿರುಕುಳ ತಾಳಲಾರದೆ ವಿಷ ಸೇವಿಸಿ ಅಸ್ವಸ್ಥಗೊಂಡಿದ್ದ ಮಹಿಳೆ ಮೃತಪಟ್ಟಿರುವ ಘಟನೆ ತಾಲ್ಲೂಕಿನ ಬೆಳಗೂಡು ಹೋಬಳಿ ಸಿಡಗಳಲೆ ಗ್ರಾಮದಲ್ಲಿ ಭಾನುವಾರ ನಡೆದಿದೆ.

ಗ್ರಾಮದ ಮಲ್ಲೇಶ್ ಅವರ ಪತ್ನಿ ಪುಟ್ಟಲಕ್ಷ್ಮಿ (38) ಮೃತರು. ಹಾಸನದ ತಣ್ಣೀರುಹಳ್ಳದಲ್ಲಿರುವ ಶ್ರೀ ವಾಸ್ತು ಹೌಸಿಂಗ್ ಫೈನಾನ್ಸ್ ಸಂಸ್ಥೆಯಿಂದ ಮನೆ ಸಾಲ ಪಡೆದಿದ್ದರು. ಒಂದು ವರ್ಷದಿಂದ ಪ್ರತಿ ತಿಂಗಳು 15,100 ರೂ. ಪಾವತಿಸು ತ್ತಿದ್ದರು. ಅನಾರೋಗ್ಯದ ಕಾರಣ ಒಂದು ತಿಂಗಳ ಕಂತು ಪಾವತಿ ಸಲು ಸಾಧ್ಯವಾಗಿರಲಿಲ್ಲ. ಫೈನಾನ್ಸ್ ಸಿಬ್ಬಂದಿ ಮನೆಗೆ ಬಂದು ಕಿರುಕುಳ ನೀಡುತ್ತಿದ್ದರೆನ್ನಲಾಗಿದೆ. ಗ್ರಾಮಸ್ಥರ ಎದುರು ಅವಮಾನವಾಯಿತೆಂದು ಪುಟ್ಟಲಕ್ಷ್ಮಿ ವಿಷ ಸೇವಿಸಿದ್ದರು.

## ಹೆದ್ದಾರಿ ಸಮೀಪ ಯುವಕನ ಶವ ಪತ್ತೆ: ಕೊಲೆ ಶಂಕೆ

» ಮೊದಲನೇ ಪುಟದಿಂದ

ಇದೇ ವಿಚಾರವಾಗಿ ವೈರತ್ವ ಬೆಳೆದು ಸಂಜು ಹಾಗು ಇತರರು ಸುದೀಪ್‌ನನ್ನು ಹತ್ಯೆಗೈದಿದ್ದಾರೆ ಎನ್ನಲಾಗಿದೆ.

ಮೃತ ಸುದೀಪ್ ಹಾಸನದ ಎಚ್‌ಪಿ ಫ್ಯಾಕ್ಟರಿ ಉದ್ಯೋಗಿಯಾಗಿದ್ದ. ಪ್ರಕರಣವನ್ನು ಅಪಘಾತವೆಂದು ಬಿಂಬಿಸಲು ಹತ್ಯೆಗೈದವರು ಆತ ದಿನ ಓಡಾಡುತ್ತಿದ್ದ ಜಾಗದಲ್ಲೇ ಶವ ಎಸೆದು ಹೋಗಿರುವ ಶಂಕೆ ಇದೆ. ಯುವತಿ ಪ್ರೀತಿ ನಿರಾಕರಿಸಿದ ಹಿನ್ನಲೆಯಲ್ಲಿ ಮಾನಸಿಕವಾಗಿ ನೊಂದಿದ್ದ ಸುದೀಪ್ ಶನಿವಾರ ರಾತ್ರಿ ಸ್ನೇಹಿತ ಮನೋಜ್‌ಗೆ ಕರೆ ಮಾಡಿ ಭೇರ್ಯ ಗ್ರಾಮಕ್ಕೆ ತೆರಳುತ್ತಿದ್ದೇನೆಂದು ಹೇಳಿದ್ದ. ಆದರೆ ಬೆಳಗ್ಗಾವಷ್ಟರಲ್ಲಿ ಆಲಗೌಡನಹಳ್ಳಿ ಸಮೀಪ ಶವ ಪತ್ತೆಯಾಗಿದೆ. ಸಂಜು ಹಾಗು ಇತರರು ಕೊಲೆ ಮಾಡಿ ಎಸೆದಿದ್ದಾರೆ. ಯುವಕನ ಮುಖ ಹಾಗು ದೇಹದ ಇತರ ಭಾಗದಲ್ಲಿ ಗಾಯದ ಗುರುತುಗಳಿವೆ ಎಂದು ಕುಟುಂಬಸ್ಥರು ದೂರಿದ್ದಾರೆ.



ಸಾರ್ವಜನಿಕರಿಂದ ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ತಮ್ಮಯ್ಯ ಇತರರು ಪರಿಶೀಲಿಸಿದರು. ಮರಣೋತ್ತರ ಪರೀಕ್ಷೆಗಾಗಿ ಶವವನ್ನು ಹಿಮ್ಸ್‌ಗೆ ರವಾನಿಸಲಾಗಿದೆ. ಹಳ್ಳಿಮೈಸೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ನೇಪಾಳ ಮಾಜಿ ಸ್ಪೀಕರ್ ಬಂಧನ

**ಕಠ್ಮಂಡು:** ನೇಪಾಳದ ಮಾಜಿ ಸ್ಪೀಕರ್ ಕೃಷ್ಣ ಬಹದ್ದೂರ್ ಮಹಾರಾ ಅವರನ್ನು ಚಿನ್ನ ಕಳ್ಳಸಾಗಣೆ ಪ್ರಕ ರಣದಲ್ಲಿ ಭಾಗಿಯಾಗಿರುವ ಆರೋಪದಡಿ ಭಾನುವಾರ ಬಂಧಿಸಲಾಗಿದೆ.

ಕಮ್ಯುನಿಸ್ಟ್ ಪಾರ್ಟಿ ಆಫ್ ನೇಪಾಳದ ಉಪಾಧ್ಯಕ್ಷರೂ ಆಗಿರುವ ಮಹಾರಾ (67) ಅವರನ್ನು ಲಲಿತ್‌ಪುರದಲ್ಲಿನ ಅವರ ನಿವಾಸದಲ್ಲಿ ಸೆಂಟ್ರಲ್ ಇನ್‌ವೆಸ್ಟಿಗೇಷನ್ ಬ್ಯೂರೊ(ಸಿಐಬಿ) ಬಂಧಿಸಿದೆ ಎಂದು ನೇಪಾಳ ಪೊಲೀಸರ ಪ್ರಕಟಣೆ ತಿಳಿಸಿದೆ.

ಮೂರು ವರ್ಷಗಳ ಹಿಂದೆ ಕಠ್ಮಂಡು ವಿಮಾನ ನಿಲ್ದಾಣದಲ್ಲಿ ವಶಪಡಿಸಿಕೊಳ್ಳಲಾಗಿದ್ದ 5.36 ಕೋಟಿ ಮೌಲ್ಯದ ಚಿನ್ನದ ಬಿಸ್ಕತ್ತುಗಳ ಮಾರಾಟದಲ್ಲಿ ಭಾಗಿಯಾಗಿರುವ ಆರೋಪ ಮಹಾರಾ ಅವರ ಮೇಲಿದೆ. ಎಲೆಕ್ಟ್ರಾನಿಕ್ ಸಿಗರೇಟ್‌ಗಳ ಒಳಗೆ ಚಿನ್ನದ ತುಂಡುಗ ಳನ್ನು ಇಟ್ಟು ಸಾಗಿಸುತ್ತಿದ್ದ ಚೀನಾದ ಪ್ರಜೆಯೊಬ್ಬನನ್ನು ಕಠ್ಮಂಡು ವಿಮಾನ ನಿಲ್ದಾಣದಲ್ಲಿ ಮೂರು ವರ್ಷಗಳ ಹಿಂದೆ ಬಂಧಿಸಲಾಗಿತ್ತು. ಈ ಚಿನ್ನದ ತುಂಡುಗಳನ್ನು ಮಾರಾಟ ಮಾಡಲು, ಗ್ಯಾಂಗ್‌ಗಳಿಗೆ ಮತ್ತು ವಿಮಾನ ನಿಲ್ದಾಣದ ಸಿಬ್ಬಂದಿಗೆ ಸಲಹೆ ನೀಡುತ್ತಿದ್ದರೆಂದು ಆರೋಪಿಸಲಾಗಿದೆ.

## ಗಾಜಾ ಶಾಂತಿ ಶೃಂಗಸಭೆಗೆ ಮೋದಿ ಭಾಗವಹಿಸಲ್ಲ

• ಪ್ರಜೋದಯ ವರದಿ

**ಈಜಿಪ್ಟ್:** ಗಾಜಾ ಶಾಂತಿ ಶೃಂಗ ಸಭೆಗೆ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಈಜಿಪ್ಟ್ ಅಧ್ಯಕ್ಷ ಅಬ್ದೆಲ್ ಫತ್ತಾಹ್ ಎಲ್-ಸಿಸಿ ಅವರಿಂದ ಅಧಿಕೃತ ಆಹ್ವಾನ ಬಂದಿದೆಯಾದರೂ ಪ್ರಧಾನಿ ಭಾಗವಹಿಸದೆ ಭಾರತದ ಪರವಾಗಿ ವಿದೇಶಾಂಗ ಸಚಿವಾಲಯದ ರಾಜ್ಯ ಸಚಿವ ಕೀರ್ತಿ ವರ್ಧನ್ ಸಿಂಗ್ ಪಾಲ್ಗೊಳ್ಳಲಿದ್ದಾರೆ.

ಈ ಶೃಂಗ ಸಭೆಯು ಗಾಜಾ ಪಟ್ಟಿಯಲ್ಲಿ ನಡೆಯುತ್ತಿರುವ ಯುದ್ಧವನ್ನು ಕೊನೆಗೊಳಿಸುವ ಗುರಿ ಹೊಂದಿದೆ. ಸಭೆಯು ಅಮೇರಿಕಾದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅಧ್ಯಕ್ಷತೆಯಲ್ಲಿ ನಡೆಯಲಿದ್ದು, ವಿಶ್ವದ 20ಕ್ಕೂ ಹೆಚ್ಚು ದೇಶಗಳ ನಾಯಕರು, ಯುಎನ್ ಪ್ರಧಾನ ಕಾರ್ಯದರ್ಶಿ ಆಂಟೋನಿಯೊ ಗುಟೆರೆಸ್, ಯುಕೆ ಪ್ರಧಾನಿ ಕೀರ್ ಸ್ಟಾರ್ಮರ್, ಇಟಲಿಯ ಪ್ರಧಾನಿ ಜಾರ್ಜಿಯಾ ಮೆಲೋನಿ, ಸ್ಪೇನ್ ಪ್ರಧಾನಿ ಪೆಡ್ರೊ ಸ್ಯಾಂಚೆಜ್ ಮತ್ತು ಫ್ರಾನ್ಸ್ ಅಧ್ಯಕ್ಷ ಇಮ್ಯಾನುಯೆಲ್ ಮ್ಯಾಕ್ರೋನ್ ಭಾಗವಹಿಸಲಿದ್ದಾರೆ.

ಗಾಜಾ ಪಟ್ಟಿಯಲ್ಲಿ ನಡೆಯುತ್ತಿರುವ ಯುದ್ಧ ನಿಲ್ಲಿಸುವುದು. ಮಧ್ಯಪ್ರಾಚ್ಯದಲ್ಲಿ ಶಾಂತಿ ಮತ್ತು ಸ್ಥಿರತೆ ಹೆಚ್ಚಿಸುವುದು. ಜೊತೆಗೆ ಈ ಪ್ರದೇಶದಲ್ಲಿ ಹೊಸ ಭದ್ರತಾ ಯುಗ ಪ್ರಾರಂಭಿಸುವುದು. ಇತ್ತೀಚೆಗೆ ಇಸ್ರೇಲ್ ಕದನ ವಿರಾಮ ಘೋಷಿಸಿ ಕೆಲವು ಪಡೆಗಳನ್ನು ಹಿಂಪಡೆದ ನಂತರ, ಸ್ಥಳಾಂತರಗೊಂಡ ಪ್ಯಾಲೆಸ್ತೀನಿಯನ್ ಕುಟುಂಬಗಳು ನಾಶವಾದ ಪ್ರದೇಶಗಳಿಗೆ ಮರಳಲು ಸಾಧ್ಯವಾಗಿದೆ. ಈ ಹಿನ್ನೆಲೆಯಲ್ಲಿ ಈ ಸಭೆ ನಡೆಯುತ್ತಿದೆ.

ಶಾಂತಿ ಪ್ರಕ್ರಿಯೆ ಹಲವು ಅಡೆತಡೆಗಳನ್ನು ಎದುರಿಸುತ್ತಿದೆ. ಪ್ಯಾಲೆಸ್ತೀನಿಯನ್ ಉಗ್ರಗಾಮಿ ಸಂಘಟನೆ ಹಮಾಸ್, ಶಾಂತಿ ಒಪ್ಪಂದದ ಅಧಿಕೃತ ಸಹಿ ಹಾಕುವಿಕೆಯನ್ನು ಬಹಿಷ್ಕರಿಸುವುದಾಗಿ ಘೋಷಿಸಿದೆ. ಟ್ರಂಪ್ ಅವರ ಯೋಜನೆಯ ಕೆಲವು ಪ್ರಮುಖ ಅಂಶಗಳಾದ ನಿಶ್ಯಸ್ತ್ರೀಕರಣದ ಬೇಡಿಕೆಗಳ ಬಗ್ಗೆ ಹಮಾಸ್‌ಗೆ ಭಿನ್ನಾಭಿಪ್ರಾಯಗಳಿವೆ. ಹಮಾಸ್ ನಾಯಕರು, ಪ್ಯಾಲೆಸ್ತೀನಿಯರನ್ನು ಗಾಜಾದಿಂದ ಸ್ಥಳಾಂತರಿಸುವ ಪ್ರಸ್ತಾವನೆಗಳನ್ನು ಅಸಂಬದ್ಧವೆಂದು ತಳ್ಳಿಹಾಕಿದ್ದಾರೆ. ಇದು ಮುಂಬರುವ ದಿನಗಳಲ್ಲಿ ಸಂಕೀರ್ಣತೆಗಳು ಮುಂದುವರಿಯಲಿವೆ ಎಂಬುದನ್ನು ಸೂಚಿಸುತ್ತದೆ.

## ಅಪರಿಚಿತ ವಾಹನ ಡಿಕ್ಕಿ: ಬೈಕ್ ಸವಾರ ಸಾವು

• ಪ್ರಜೋದಯ ವರದಿ

**ಹಾಸನ:** ಅಪರಿಚಿತ ವಾಹನ ಡಿಕ್ಕಿಯಾಗಿ ಬೈಕ್ ಸವಾರ ಮೃತಪಟ್ಟಿರುವ ಘಟನೆ ತಾಲ್ಲೂಕಿನ ಮಳಲಿ ಕಾವಲು ಸಮೀಪ ನಡೆದಿದೆ.

ಹೊಳೆನರಸೀಪುರ ತಾಲ್ಲೂಕು ಕಾರಗನಹಳ್ಳಿ ಗ್ರಾಮದ ಜಯರಾಮ ಮೃತರು. ಕೂಲಿ ಕೆಲಸ ಮಾಡಿಕೊಂಡಿದ್ದ ಜಯರಾಮ ಅವರು ಅ.10ರಂದು ಮೊಸಳೆಹೊಸಹಳ್ಳಿಯಲ್ಲಿ ಮನೆಗೆ ದಿನಸಿ ಸಾಮಾಗ್ರಿ ತೆಗೆದುಕೊಂಡು ಬೈಕ್‌ನಲ್ಲಿ ಹೋಗುತ್ತಿದ್ದಾಗ ಎದುರುಗಡೆಯಿಂದ ವೇಗವಾಗಿ ಬಂದ ಅಪರಿಚಿತ ವಾಹನ ಡಿಕ್ಕಿಯಾಗಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಶಾಂತಿಗ್ರಾಮ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ವಿಶ್ವದಾಖಲೆ ಬರೆದ ಜಗತ್ತಿನ ಮೊದಲ ಬ್ಯಾಟರ್ ಸ್ಮೃತಿ ಮಂದಾನ ಇತಿಹಾಸ

• ಪ್ರಜೋದಯ ವರದಿ

**ನವದೆಹಲಿ :** ಐಸಿಸಿ ಮಹಿಳಾ ಕ್ರಿಕೆಟ್ ವಿಶ್ವಕಪ್ 2025ರ ನಾಲ್ಕನೇ ಪಂದ್ಯ ಭಾರತ ಮತ್ತು ಆಸ್ಟ್ರೇಲಿಯಾ ನಡುವೆ ನಡೆಯುತ್ತಿದೆ. ಈ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಆಯ್ಕೆ ಮಾಡಿದ್ದ ಭಾರತ ಸ್ಫೋಟಕ ಬ್ಯಾಟಿಂಗ್ ಮಾಡಿದ್ದು, 330 ರನ್‌ಗಳ ಬೃಹತ್ ಮೊತ್ತ ಕಲೆಹಾಕಿದೆ. ವಿಶಾಖಪಟ್ಟಣದ ಎಸಿಎ-ವಿಡಿಸಿಎ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆದ ಈ ಪಂದ್ಯದಲ್ಲಿ ಭಾರತದ ಸ್ಮೃತಿ ಮಂದಾನ ಇತಿಹಾಸ ಸೃಷ್ಟಿಸಿದ್ದಾರೆ.

ಸ್ಮೃತಿ ಮಂದಾನ ಮತ್ತು ಪ್ರತೀಕಾ ರಾವಲ್ ಈ ಪಂದ್ಯದಲ್ಲಿ ಭಾರತೀಯ ತಂಡಕ್ಕೆ ಬಲವಾದ ಆರಂಭವನ್ನು ನೀಡಿದರು. ಇಬ್ಬರೂ ಆಟಗಾರ್ತಿಯರು ಪವರ್‌ಪ್ಲೇನಲ್ಲಿ ಸ್ಫೋಟಕ ಬ್ಯಾಟಿಂಗ್ ಮಾಡಿದರು. ಪವರ್‌ಪ್ಲೇಯಲ್ಲಿ ಭಾರತ ತಂಡವು ವಿಕೆಟ್ ಕಳೆದುಕೊಳ್ಳದೆ 58 ರನ್ ಗಳಿಸಿತು. ಈ ಅವಧಿಯಲ್ಲಿ ಸ್ಮೃತಿ ಪ್ರಮುಖ ದಾಖಲೆಯನ್ನು ಸ್ಥಾಪಿಸಿದರು. ಎಡಗೈ ಬ್ಯಾಟ್ಸ್ ಮನ್ ಸ್ಮೃತಿ ಈ ವರ್ಷ ಮಹಿಳಾ ಏಕದಿನ ಪಂದ್ಯಗಳಲ್ಲಿ 1,000 ರನ್ ಪೂರೈಸಿ ದಾಖಲೆ ಬರೆದರು.

ಸ್ಮೃತಿ ಮಂಧಾನ ಕ್ಯಾಲೆಂಡರ್



ವರ್ಷದಲ್ಲಿ ಮಹಿಳಾ ಏಕದಿನ ಪಂದ್ಯಗಳಲ್ಲಿ 1,000 ರನ್ ಗಳಿಸಿದ ಮೊದಲ ಬ್ಯಾಟ್ಸ್ ಮನ್ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಈ ಮೊದಲು ಬೇರೆ ಯಾವುದೇ ಮಹಿಳಾ ಆಟಗಾರ್ತಿ ಈ ಸಾಧನೆ ಮಾಡಿರಲಿಲ್ಲ. ಈ ಹಿಂದೆ ಆಸ್ಟ್ರೇಲಿಯಾದ ಮಾಜಿ ನಾಯಕಿ ಬೆಲಿಂಡಾ ಕ್ಲಾರ್ಕ್ 1997ರಲ್ಲಿ ಮಹಿಳಾ ಏಕದಿನ ಪಂದ್ಯಗಳಲ್ಲಿ 80.83 ಸರಾಸರಿಯಲ್ಲಿ 970 ರನ್ ಗಳಿಸಿದ್ದರು.

ಮಹಿಳಾ ಏಕದಿನ ಪಂದ್ಯಗಳಲ್ಲಿ ಸ್ಮೃತಿ ಮಂದಾನ ಕೂಡ 5,000 ರನ್ ಪೂರೈಸಿದರು. ಈ ಸಾಧನೆ ಮಾಡಿದ ಎರಡನೇ ಭಾರತೀಯ ಮತ್ತು ವಿಶ್ವದ ಐದನೇ ಆಟಗಾರ್ತಿ ಎಂಬ ಹೆಗ್ಗಳಿಕೆಗೆ ಪಾತ್ರರಾದರು. ಸ್ಮೃತಿ ಕೇವಲ 112 ಇನ್ನಿಂಗ್ಸ್‌ಗಳಲ್ಲಿ ಈ ಮೈಲಿಗಲ್ಲು ಸಾಧಿಸಿದರು. ಮಹಿಳಾ ಏಕದಿನ ಪಂದ್ಯಗಳಲ್ಲಿ ಕಡಿಮೆ ಇನ್ನಿಂಗ್ಸ್ ಮತ್ತು ಎಸೆತಗಳಲ್ಲಿ 5,000 ರನ್ ತಲುಪಿದ ಆಟಗಾರ್ತಿ ಸ್ಮೃತಿ. ಅವರು ಸ್ಟೆಫಾನಿ ಟೇಲರ್ (129 ಇನ್ನಿಂಗ್ಸ್) ಮತ್ತು ಸುಜೀ ಬೇಟ್ಸ್ (6182 ಎಸೆತಗಳು) ಅವರ ದಾಖಲೆಗಳನ್ನು ಮುರಿದ್ದಾರೆ.

## ಭಾರತ ಬಲಾಢ್ಯ, ಒಗ್ಗಟ್ಟಾಗಿರುವುದನ್ನು ಸಂವಿಧಾನ ಖಾತ್ರಿಪಡಿಸಿದೆ

• ಪ್ರಜೋದಯ ವರದಿ

**ರತ್ನಗಿರಿ:** ನೆರೆಹೊರೆಯ ರಾಷ್ಟ್ರಗಳು ಅಶಾಂತಿ ಹಾಗೂ ಪ್ರಕ್ಷುಬ್ಧತೆಯನ್ನು ಎದುರಿಸುತ್ತಿರುವಾಗ, ದೇಶವು ಬಲಾಢ್ಯ ಮತ್ತು ಒಗ್ಗಟ್ಟಾಗಿರುವುದನ್ನು ಸಂವಿಧಾನ ಖಚಿತಪಡಿಸಿದೆ ಎಂದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಭೂಷಣ್ ಗವಾಯಿ ಅವರು ಭಾನುವಾರ ಹೇಳಿದರು.

ಮಹಾರಾಷ್ಟ್ರದ ರತ್ನಗಿರಿ ಜಿಲ್ಲೆಯ ಮಂಡಣಗಡ ತಾಲ್ಲೂಕಿನಲ್ಲಿ ನ್ಯಾಯಾಲಯದ ಕಟ್ಟಡವನ್ನು ಉದ್ಘಾಟಿಸಿ ಮಾತನಾಡಿದ ಸಿಜೆಐ, ನಾವು ಆಂತರಿಕ ತುರ್ತು ಪರಿಸ್ಥಿತಿ ಯನ್ನು ಎದುರಿಸಿದರೂ ಬಲಿಷ್ಠವಾಗಿದ್ದೇವೆ ಹಾಗೂ ಒಂದಾಗಿದ್ದೇವೆ ಎಂದರು. ಯುದ್ಧ ಮತ್ತು ಶಾಂತಿಯಲ್ಲಿ ದೇಶವು ಒಗ್ಗಟ್ಟಿನಿಂದ ಹಾಗೂ ಅಭಿವೃದ್ಧಿ ಪಥದಲ್ಲೇ ಉಳಿದಿರುವುದಕ್ಕೆ ಬಾಬಾಸಾಹೇಬ್ ಅಂಬೇಡ್ಕರ್ ಅವರು ನೀಡಿದ ಸಂವಿಧಾನವೇ ಕಾರಣ ಎಂದು ಹೇಳಿದರು.

ಶ್ರೀಲಂಕಾ, ಬಾಂಗ್ಲಾದೇಶ ಮತ್ತು ಈಚೆಗೆ ನೇಪಾಳದಲ್ಲಿ ನಡೆದ ನಾಗರಿಕ ಅಶಾಂತಿಯು ಸರ್ಕಾರಗಳನ್ನೇ ಬದಲಿಸಿದೆ. ಗಲಭೆಯಿಂದ ಭಾರಿ ಹಾನಿಯಾಗಿದೆ ಎಂದರು.

ಕಳೆದ 22 ವರ್ಷಗಳಲ್ಲಿ ನಾನು ನ್ಯಾಯಾಧೀಶನಾಗಿ, ನ್ಯಾಯಮೂರ್ತಿಯಾಗಿ ನ್ಯಾಯದಾನ ವ್ಯವಸ್ಥೆಯ ವಿಕೇಂದ್ರೀಕರಣದ ಪರವಾಗಿ ನಿಂತಿದ್ದೇನೆ. ನ್ಯಾಯಾಂಗ ವ್ಯವಸ್ಥೆಯಲ್ಲಿ ಹಲವು ಮೂಲಸೌಕರ್ಯ ಯೋಜನೆಗಳು ಪೂರ್ಣಗೊಳ್ಳುವುದನ್ನು ಖಾತ್ರಿಪಡಿಸಿದ್ದೇನೆ ಎಂದು ತಿಳಿಸಿದರು.

ಕೊಲ್ಹಾಪುರ ಸರ್ಕ್ಯೂಟ್ ಬೆಂಚ್ (ಬಾಂಬೆ ಹೈಕೋರ್ಟ್) ಮತ್ತು ಮಂಡಣಗಡ ನ್ಯಾಯಾಲಯದ ಕಟ್ಟಡವು ಎರಡು ವರ್ಷದಲ್ಲಿ ಪೂರ್ಣ ಗೊಂಡಿದೆ. ನಾಸಿಕ್, ನಾಗ್ಪುರ, ಕೊಲ್ಹಾಪುರ, ದರ್ಯಾಪುರದಲ್ಲಿ ಈಚೆಗಷ್ಟೇ ನ್ಯಾಯಾಲಯಗಳ ನೂತನ ಸಂಕೀರ್ಣ ಕಾರ್ಯಾರಂಭ ಮಾಡಿವೆ. ಇವುಗಳ ಗುಣಮಟ್ಟದ ಬಗ್ಗೆ ತೃಪ್ತಿಯಿದೆ ಎಂದರು.

ಸಂವಿಧಾನ ಶಿಲ್ಪಿ ಬಾಬಾಸಾಹೇಬ್ ಅವರ ಅಂಬಾವಡೆ ಗ್ರಾಮವಿರುವ ಪ್ರದೇಶಕ್ಕೆ ಬಂದಿರುವುದು ಸಂತಸ ತಂದಿದ್ದು, ಈ ನೂತನ ನ್ಯಾಯಾಲಯಗಳು ಅಂಬೇಡ್ಕರ್ ಅವರ ಕನಸಿನಂತೆ ಸಮಾಜದ ಕಟ್ಟಕಡೆಯ ವ್ಯಕ್ತಿಗೂ ತ್ವರಿತವಾಗಿ ನ್ಯಾಯ ಒದಗಿಸಲಿವೆ ಎಂದು ಹೇಳಿದರು.

# ಬೆಂಗಳೂರು ನಡಿಗೆ- ಮುನಿರತ್ನ ಹೈಡ್ರಾಮಾ

• ಪ್ರಜೋದಯ ವರದಿ

**ಬೆಂಗಳೂರು :** ಉಪಮುಖ್ಯಮಂತ್ರಿ ಹಾಗೂ ಬೆಂಗಳೂರು ನಗರಾಭಿವೃದ್ಧಿ ಸಚಿವ ಡಿ.ಕೆ. ಶಿವಕುಮಾರ್ ರವರ ಬೆಂಗಳೂರು ನಡಿಗೆ ಕಾರ್ಯಕ್ರಮದಲ್ಲಿ ಬಿಜೆಪಿ ಶಾಸಕ ಮುನಿರತ್ನರವರು ಹೈಡ್ರಾಮಾವನ್ನೇ ನಡೆಸಿದ ಪ್ರಸಂಗ ಭಾನುವಾರ ಜರುಗಿದೆ.

ಶನಿವಾರದಿಂದ ಬೆಂಗಳೂರು ನಡಿಗೆ ಕಾರ್ಯಕ್ರಮವನ್ನು ಆರಂಭಿಸಿ ಲಾಲ್‌ಬಾಗ್‌ನಲ್ಲಿ ವಾಯುವಿಹಾರಿಗಳ ಜೊತೆ ಹೆಜ್ಜೆ ಹಾಕಿ ಅವರ ಅಹವಾಲು ಆಲಿಸಿದ್ದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು, ಭಾನುವಾರ ಬೆಳಿಗ್ಗೆ ಮತ್ತೀಕೆರೆಯ ಜೆ.ಪಿ.ಪಾರ್ಕ್‌ನಲ್ಲಿ ಬೆಂಗಳೂರು ನಡಿಗೆ ಕಾರ್ಯಕ್ರಮದಲ್ಲಿ ನಾಗರಿಕರ ಅಹವಾಲು ಆಲಿಸುತ್ತಿದ್ದಾಗ ಸ್ಥಳೀಯ ಶಾಸಕರಾದ ತಮ್ಮನ್ನು ಈ ಕಾರ್ಯಕ್ರಮಕ್ಕೆ ಕರೆದಿಲ್ಲವೆಂದು ಬಿಜೆಪಿ ಶಾಸಕ ಮುನಿರತ್ನ ಗದ್ದಲ ಎಬ್ಬಿಸಿ ಹೈಡ್ರಾಮಾ ನಡೆಸಿದರು.

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಬೆಳ್ಳಂಬೆಳಿಗ್ಗೆಯೇ ಜೆ.ಪಿ.ಪಾರ್ಕ್‌ಗೆ ಆಗಮಿಸಿ ಜನರ ಜೊತೆ ಹೆಜ್ಜೆ ಹಾಕಿ ನಂತರ ವೇದಿಕೆ ಕಾರ್ಯಕ್ರಮದಲ್ಲಿ ಭಾಗಿಯಾಗಿ ಜನರ ಅಹವಾಲನ್ನು ಒಂದೊಂದಾಗಿ ಆಲಿಸುತ್ತಿದ್ದರು.

ಈ ಸಂದರ್ಭದಲ್ಲಿ ಜನರ ಮಧ್ಯೆ ಕುಳಿತಿದ್ದ ಆರ್‌ಎಸ್‌ಎಸ್ ಗಣವೇಷ ಧಾರಿಯಾಗಿದ್ದ ಶಾಸಕ ಮುನಿರತ್ನರವರನ್ನು ಡಿ.ಕೆ.ಶಿವಕುಮಾರ್ ಅವರು ಏ ಕರಿಟೋಪಿ ಎಂಎಲ್‌ಎ ಬಾರಪ್ಪಾ



ಎಂದು ಹಾಸ್ಯದ ದಾಟಿಯಲ್ಲಿ ಹೇಳಿ ವೇದಿಕೆಗೆ ಆಹ್ವಾನಿಸಿದರು. ಆಗ ಮುನಿರತ್ನ ಅವರು ವೇದಿಕೆಗೆ ಹೋಗಿ ಶಿವಕುಮಾರ್ ಬಳಿ ಬಲವಂತವಾಗಿ ಮೈಕ್ ಕೇಳಿ ಪಡೆದು, ಈ ಕಾರ್ಯಕ್ರಮಕ್ಕೆ ನನ್ನನ್ನು ಆಹ್ವಾನಿಸಿಲ್ಲ. ಆರ್‌ಎಸ್‌ಎಸ್ ಪಥಸಂಚಲನ ಮುಗಿಸಿ ನಾನು ಬಂದಿದ್ದೇನೆ. ಜನರ ಮಧ್ಯೆಯೇ ನಾನು ಪ್ರಜೆಯಾಗಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುತ್ತೇನೆಂದು ಹೇಳಿ, ಜನರ ಮಧ್ಯೆ ಹೋಗಿ ಮತ್ತೆ ಕುಳಿತರು.

ಆಗ ಸಭೆಯ ನಿರೂಪಕರು ಮುನಿರತ್ನರವರನ್ನು ಸ್ವಾಗತಿಸಿ, ವೇದಿಕೆಗೆ ಆಹ್ವಾನಿಸಿದರು. ಈ ಸಂದರ್ಭದಲ್ಲಿ ವೇದಿಕೆ ಏರಿದ ಮುನಿರತ್ನ ಅವರು ನಾನು ಜನಪ್ರತಿನಿಧಿಯಾಗಿದ್ದೇನೆ. ನನ್ನನ್ನು ಕಾರ್ಯಕ್ರಮಕ್ಕೆ ಕರೆದಿಲ್ಲ. ಕಾರ್ಯಕ್ರಮದ ಬ್ಯಾನರ್‌ನಲ್ಲೂ ನನ್ನ ಫೋಟೋವಾಗಲೀ, ಸಂಸದರ ಫೋಟೋವಾಗಲೀ ಹಾಕಿಲ್ಲ. ಇದು ಸರ್ಕಾರಿ ಕಾರ್ಯಕ್ರಮವೇ ಅಥವಾ ಕಾಂಗ್ರೆಸ್ ಪಕ್ಷದ ಕಾರ್ಯಕ್ರಮವೇ ಎಂದು ಗ್ರೇಟರ್ ಬೆಂಗಳೂರು ಮುಖ್ಯ ಆಯುಕ್ತರನ್ನು ಪ್ರಶ್ನಿಸಿದರು.

ಈ ಹಂತದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಮುನಿರತ್ನ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ಹೊರ ಹಾಕಿದರು. ಮುನಿರತ್ನ ಬೆಂಬಲಿಗರು ಹಾಗೂ ಕಾಂಗ್ರೆಸ್ ಕಾರ್ಯಕರ್ತರ ನಡುವೆ ಮಾತಿನ ಜಟಾಪಟಿ ನಡೆದು ಕೈ ಕೈ ಮಿಲಾಯಿಸುವ ಹಂತಕ್ಕೆ ಪರಿಸ್ಥಿತಿ ತಲುಪಿ ದೊಡ್ಡ ಹೈಡ್ರಾಮಾವೇ ಸೃಷ್ಠಿಯಾಯಿತು. ನಂತರ ಪೊಲೀಸರು ಮಧ್ಯೆ ಪ್ರವೇಶಿಸಿ ಮುನಿರತ್ನರವರನ್ನು ಕಾರ್ಯಕ್ರಮದ ವೇದಿಕೆಯಿಂದ ಹೊರಗೆ ಕರೆದುಕೊಂಡು ಹೋದರು. ಇದಾದ ನಂತರ ಮುನಿರತ್ನ ಜೆ.ಪಿ. ಪಾರ್ಕ್‌ನಲ್ಲೇ ಏಕಾಂಗಿಯಾಗಿ ಧರಣಿಯನ್ನು ನಡೆಸಿದರು.

ಬಳಿಕ ಡಿ.ಕೆ. ಶಿವಕುಮಾರ್ ನಾಗರಿಕರ ಸಮಸ್ಯೆಗಳನ್ನು ಆಲಿಸಿ, ಅವುಗಳಿಗೆ ಪರಿಹಾರ ದೊರಕಿಸುವ ನಿಟ್ಟಿನಲ್ಲಿ ಅಧಿಕಾರಿಗಳಿಗೆ ಸಲಹೆ, ಸೂಚನೆಗಳನ್ನು ನೀಡಿದರು.

### ಇಂತಹ ಶಾಸಕನನ್ನು ಆಯ್ಕೆ ಮಾಡಿ ಎಂತಹ ನರಕದಲ್ಲಿದ್ದೀರಿ ಎಂಬುದು ಗೊತ್ತಿದೆ : ಡಿಕೆಶಿ

ಶಾಸಕ ಮುನಿರತ್ನ ನಾಯ್ಡು ರವರ ವರ್ತನೆ ನೋಡಿದರೆ ನೀವು ಎಂತಹ ನರಕದಲ್ಲಿ ಬದುಕುತ್ತಿದ್ದೀರಿ ಅನಿಸುತ್ತದೆ. ಇಂತಹ ನಾಯಕನನ್ನು ಆಯ್ಕೆ ಮಾಡಿಕೊಂಡ ನಿಮ್ಮ ಪರಿಸ್ಥಿತಿ ನನಗೆ ಅರ್ಥವಾಗುತ್ತದೆ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ರಾಜರಾಜೇಶ್ವರಿನಗರ ಕ್ಷೇತ್ರದ ಜನರ ಬಗ್ಗೆ ಅನುಕಂಪ ವ್ಯಕ್ತಪಡಿಸಿದರು.

ಮತ್ತೀಕೆರೆಯ ಜೆ.ಪಿ. ಪಾರ್ಕ್‌ನಲ್ಲಿ ಮುನಿರತ್ನ ಸೃಷ್ಠಿಸಿದ ಹೈಡ್ರಾಮಾದ ನಂತರ ಮಾತನಾಡಿದ ಅವರು, ಜನರ ಜತೆ ನಾವು ಸಂವಾದ ನಡೆಸಿದ ಕಾರ್ಯಕ್ರಮಕ್ಕೆ ಮುನಿರತ್ನ ನಾಯ್ಡು ಮತ್ತು ಅವರ ಬೆಂಬಲಿಗರು ಅಡ್ಡಿಪಡಿಸಿದ ಬಗ್ಗೆ ಬೇಸರ ವ್ಯಕ್ತಪಡಿಸಿ, ಈ ಶಾಸಕರಿಗೆ ತಾಳ್ಮೆ ಇಲ್ಲ. ಅವರು ಕಾರ್ಯಕ್ರಮವನ್ನು ಹಾಳು ಮಾಡಬೇಕೆಂದು ಬಂದಿದ್ದಾರೋ ಗೊತ್ತಿಲ್ಲ. ಇದಕ್ಕೆಲ್ಲಾ ನಾವು ತಲೆಕೆಡಿಸಿಕೊಳ್ಳುವುದಿಲ್ಲ, ನೀವು ತಲೆಕೆಡಿಸಿಕೊಳ್ಳಬೇಡಿ. ಇಂತಹ ಶಾಸಕನನ್ನು ಆಯ್ಕೆ ಮಾಡಿಕೊಂಡಿದ್ದಕ್ಕೆ ನಿಮ್ಮ ಮನಸ್ಸಿಗೆ ಬಹಳ ನೋವಾಗಿದೆ ಎಂಬುದು ನನಗೆ ಗೊತ್ತಿದೆ. ಇದಕ್ಕೆಲ್ಲಾ ಸೂಕ್ತ ಸಮಯದಲ್ಲಿ ಉತ್ತರ ನೀಡಿ ಎಂದರು.

ಇಂತಹ ಶಾಸಕನನ್ನು ಇಟ್ಟುಕೊಳ್ಳುವುದೋ, ಬೇಡವೋ ಎಂಬುದನ್ನು ಜನ ತೀರ್ಮಾನ ಮಾಡಬೇಕು. ಇದರ ಬಗ್ಗೆ ನಾನು ಹೆಚ್ಚು ಮಾತನಾಡಲು ಹೋಗಲ್ಲ. ಜನಪ್ರತಿನಿಧಿಗಳಿಗೆ ಏನು ಗೌರವ ನೀಡಬೇಕು ಎಂಬ ಅರಿವು ನನಗಿದೆ. ರಾಜಕಾರಣದಲ್ಲಿ ಸೋಲು-ಗೆಲುವು ಇದ್ದೇ ಇರುತ್ತದೆ. ಯಾವುದೂ ಶಾಶ್ವತವಲ್ಲ ಎಂದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

CMYK CMYK CMYK CMYK